ಭಾರತ
ಕಮ್ಯೂನಿಸ್ಟ್
ಪಕ್ಷ
(ಮಾರ್ಕ್ಸ್‌ವಾದಿ)

# ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ಕರಡು ವಿಮರ್ಶಾ ವರದಿ

(ಹೈದರಾಬಾದಿನಲ್ಲಿ ಜನವರಿ 19–21, 2015ರಲ್ಲಿ ನಡೆದ
ಕೇಂದ್ರ ಸಮಿತಿ ಅಂಗೀಕರಿಸಿದಂತೆ)

# ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

## ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ

## ಕರಡು ವಿಮರ್ಶಾ ವರದಿ

**(ಹೈದರಾಬಾದಿನಲ್ಲಿ ಜನವರಿ 19–21, 2015ರಲ್ಲಿ ನಡೆದ ಕೇಂದ್ರ ಸಮಿತಿ ಅಂಗೀಕರಿಸಿದಂತೆ)**

1. ಜೂನ್ 2014 ರಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯಲ್ಲಿ 'ಲೋಕಸಭಾ ಚುನಾವಣೆಗಳ ವಿಮರ್ಶೆ' ನಡೆಸಿ, ಪಕ್ಷವು ಕೈಗೊಳ್ಳಬೇಕಾದ ನಾಲ್ಕು ಮುಖ್ಯವಾದ ಕ್ರಮಗಳ ಬಗ್ಗೆ ತೀರ್ಮಾನಿಸಿತ್ತು:

   (ಅ) ಪಕ್ಷವು ಅನುಸರಿಸುತ್ತಿರುವ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ಮರುವಿಮರ್ಶೆ

   (ಆ) ಪಕ್ಷದ ಸಂಘಟನೆಯ ಕಾರ್ಯವೈಖರಿ ಮತ್ತು ಜನರ ನಡುವೆ ಕೆಲಸದ ದಿಕ್ಕುದೆಸೆ

   (ಇ) ಸಾಮೂಹಿಕ ಸಂಘಟನೆಗಳಸ್ವತಂತ್ರ ಕಾರ್ಯ ನಿರ್ವಹಣೆಮತ್ತು ಅವುಗಳ ರಾಜಕೀಯ ಚಟುವಟಿಕೆ ಹಾಗೂ ಪಕ್ಷ ಕಟ್ಟುವ ಕೆಲಸದ ವಿಮರ್ಶೆ

   (ಈ) ಬೇರೆ ಬೇರೆ ವರ್ಗಗಳ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳ ಮೇಲೆ ಉದಾರೀಕರಣ ನೀತಿಗಳು ಉಂಟುಮಾಡಿರುವ ಪರಿಣಾಮಗಳ ಅಧ್ಯಯನದ ಆಧಾರದ ಮೇಲೆ ನಿರ್ದಿಷ್ಟ ಘೋಷಣೆಗಳ ನಿರೂಪಣೆ.

   ಈ ನಾಲ್ಕೂ ಕ್ರಮಗಳು ಒಂದಕ್ಕೊಂದು ಸಂಬಂಧಿಸಿವೆ ಮತ್ತು ಅವುಗಳನ್ನು ಸಮಗ್ರವಾಗಿ ಅಳವಡಿಸಿಕೊಂಡಾಗ ಪಕ್ಷದ ನ್ಯೂನತೆಗಳು –ರಾಜಕೀಯ ಮತ್ತು ಸಂಘಟನಾತ್ಮಕ – ಇಲ್ಲವಾಗುತ್ತವೆ ಮತ್ತು ಪಕ್ಷವನ್ನು ಮುಂದೊಯ್ಯಲು ಅನುಕೂಲವಾಗುತ್ತವೆ.

2. ಕೇಂದ್ರ ಸಮಿತಿಯು ಈ ನಾಲ್ಕು ಕ್ರಮಗಳಲ್ಲಿ ಮೊದಲನೆಯದಾದ ಪಕ್ಷವು ಅನುಸರಿಸುತ್ತಿರುವ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯಮರುವಿಮರ್ಶೆಯ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳುತ್ತದೆ. ಕೇಂದ್ರ ಸಮಿತಿಯು ಅಂಗೀಕರಿಸಿರವ ಚುನಾವಣಾ ವಿಮರ್ಶೆಯ ವರದಿ ಹೀಗೆ ಪ್ರಸ್ತಾಪಿಸಿದೆ:

   *"ಪಕ್ಷದ ಸ್ವಂತ ಬಲವನ್ನುಹೆಚ್ಚಿಸುವ ಬಗ್ಗೆ ಪ್ರತಿಯೊಂದು ಮಹಾಧಿವೇಶನದಲ್ಲೂ ಒತ್ತಿ ಹೇಳಿದ್ದೇವೆ. ಬೂರ್ಜ್ವಾ ಪಕ್ಷಗಳೊಂದಿಗೆ ಕಾರ್ಯತಂತ್ರಾತ್ಮಕವಾಗಿಕೈ ಜೋಡಿಸಿದ್ದರ ಪರಿಣಾಮವಾಗಿ ತಮ್ಮ ಸ್ವಂತ ಬಲ ಕುಸಿದಿದೆ ಎಂದು ಕೆಲವು ರಾಜ್ಯಗಳು ಹೇಳಿವೆ. ಪಕ್ಷದ ಸ್ವಂತ ಬಲ ಹೆಚ್ಚಿಸುವ ಪ್ರಯತ್ನದಲ್ಲಿ ವಿಫಲರಾಗಿರುವುದರಿಂದ ನಾವು ಅನುಸರಿಸುತ್ತಿರುವ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ನುಮರುವಿಮರ್ಶೆಗೆ ಒಳಪಡಿಸುವುದು ಅವಶ್ಯವಾಗಿದೆ".*

3. ಪಕ್ಷದ 21ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ, ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ಮರುವಿಮರ್ಶೆ ಕೈಗೆತ್ತಿಕೊಂಡಿದ್ದೇವೆ. ಮಹಾಧಿವೇಶನವು ಒಂದು ಪರಿಣಾಮಕಾರಿಯಾದ ರಾಜಕೀಯ–ಕಾರ್ಯತಂತ್ರಾತ್ಮಕ

ಧೋರಣೆಯನ್ನು ನಿರೂಪಿಸುವಲ್ಲಿ ಈ ಪ್ರಕ್ರಿಯೆಯು ನೆರವಾಗುತ್ತದೆ. ಕಳೆದ ಎರಡೂವರೆ ದಶಕಗಳ ಅವಧಿಯಲ್ಲಿ ನಾವು ಅನುಸರಿಸಿದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ನು ಪುನರ್‌ವಿಮರ್ಶಿಸಬೇಕಾಗಿದೆ. ಇದೇ ಅವಧಿಯಲ್ಲಿ, ಸೋವಿಯತ್‌ಒಕ್ಕೂಟ ವಿಘಟನೆಯಾದ ಪರಿಣಾಮವಾಗಿ ಅಂತರಾಷ್ಟ್ರೀಯ ವರ್ಗಗಳ ಬಲಾಬಲಗಳಲ್ಲಿ ಬದಲಾವಣೆಯಾಗಿದೆ; ನವ–ಉದಾರವಾದಿ ಹಂತದ ಅನಾವರಣದ ಆರಂಭ ಮತ್ತುಸಾಮ್ರಾಜ್ಯಶಾಹಿ–ಹಣಕಾಸು ಬಂಡವಾಳಪ್ರೇರಿತ ಜಾಗತೀಕರಣ ಪ್ರಕ್ರಿಯೆನಮ್ಮ ಸಮಾಜದ ಮೇಲೆ ನೇರ ಪರಿಣಾಮ ಬೀರಿವೆ; ಹಿಂದುತ್ವ ಕೋಮು ಶಕ್ತಿಗಳು ಒಂದು ರಾಜಕೀಯ ಶಕ್ತಿಯಾಗಿ ತಳ ಊರಿವೆ; ಜಾತಿ ಆಧಾರಿತವಾದ ಐಡೆಂಟಿಟಿ ರಾಜಕೀಯ ಪ್ರಖರವಾಗಿದೆ. ಇದು ಪಕ್ಷದ 13ನೇ ಮಹಾಧಿವೇಶನ ಜರುಗಿದ ನಂತರದ ಅವಧಿಯೂ ಆಗಿದೆ.

4. ನಮ್ಮ ಕಾರ್ಯವ್ಯೂಹಾತ್ಮಕ ಗುರಿಯಾದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಮುನ್ನೆಡೆಯಲು ಕಾಲ ಕಾಲಕ್ಕೆ ನಿರ್ಧಿಷ್ಟ ಪರಿಸ್ಥಿತಿಗಳಿಗನುಗುಣವಾಗಿ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ನು ಅನುಸರಿಸಿದ್ದೇವೆ. ಬೂರ್ಜ್ವಾ–ಭೂ ಮಾಲಕ ವ್ಯವಸ್ಥೆಗೆ ಪರ್ಯಾಯವಾಗಿ ಒಂದು ಎಡ ಹಾಗು ಪ್ರಜಾಸತ್ತಾತ್ಮಕ ರಂಗವನ್ನು ರೂಪಿಸುವುದು ನಮ್ಮ ರಾಜಕೀಯ–ರ್ಕಾತಂತ್ರಾತ್ಮಕ ಧೋರಣೆಯ ಗುರಿಯಾಗಿತ್ತು. ನಮ್ಮ ಕಾರ್ಯವ್ಯೂಹಾತ್ಮಕ ಗುರಿಯತ್ತ ಮುನ್ನೆಡೆಯಲು ಅನುವಾಗುವಂತೆ,ವರ್ಗಗಳ ನಡುವೆ ಇರುವ ಪರಸ್ಪರ ಸಂಬಂಧ ಮತ್ತು ಅವುಗಳ ಬಲಾ ಬಲಗಳ ಸ್ವರೂಪವನ್ನು ಬದಲಾಯಿಸುವುದೇ ಎಡ ಹಾಗು ಪ್ರಜಾಸತ್ತಾತ್ಮಕ ರಂಗ ರಚನೆಯ ಉದ್ದೇಶವಾಗಿತ್ತು.

5. ಹದಿಮೂರನೆ ಮಹಾಧಿವೇಶನದ ನಂತರ ಪಕ್ಷವು ಅನುಸರಿಸಿದ ಪ್ರತಿ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯೂ ಆ ಹೊತ್ತಿನ ತತ್‌ಕ್ಷಣದ ಸಮಸ್ಯೆಗಳನ್ನೆದುರಿಸಲು ಸಹಾಯಕವಾಗಿದ್ದವು. ಕಾಂಗ್ರೆಸ್ ಸರ್ಕಾರಗಳ ಜನ–ವಿರೋಧಿನೀತಿಗಳ ವಿರುದ್ಧ, ರಾಜೀವ್ ಗಾಂಧಿ ಮತ್ತು ನರಸಿಂಹ ರಾವ್ ಸರ್ಕಾರಗಳನ್ನು ಸೋಲಿಸಲು ಮಿತವಾಗಿದ್ದ ನಮ್ಮ ಬಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ನಮ್ಮ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆ ನೆರವಾಗಿದೆ. ಅದು, ಕೋಮು ಅಪಾಯದ ವಿರುದ್ಧ ಹೋರಾಡಲು ಮತ್ತು ಕಾಂಗ್ರೆಸ್ಸೇತರ ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸಿ 1996ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಸಮರ್ಥವಾಗುವ ಮಟ್ಟಿಗೆ ಪಕ್ಷವನ್ನು ಸಜ್ಜುಗೊಳಿಸಿದೆ. ತರುವಾಯ, ಅದು 2004ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಸೋಲಿಸಲು ಸರಿಯಾದ ದಾರಿ ತೋರಿಸಿದೆ. ಯುಪಿಎ–1 ಸರ್ಕಾರದ ಅವಧಿಯಲ್ಲಿ ಕೆಲವು ಜನಪರ ಕಾರ್ಯಕ್ರಮಗಳಾದ ಉದ್ಯೋಗ ಖಾತ್ರಿ ಯೋಜನೆ, ಅರಣ್ಯ ಹಕ್ಕುಗಳ ಕಾಯ್ದೆ ಮುಂತಾದವುಗಳನ್ನು ಜಾರಿಗೊಳಿಸಲು ನಡೆಸಿದ ಹೋರಾಟಗಳಿಗೆ ನಮ್ಮ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆನೆರವಾಗಿದೆ. ಪ್ರತ್ಯೇಕತಾವಾದ, ಪ್ರಾಂತೀಯ ಸಂಕುಚಿತತೆ ಮತ್ತು ಸಾಮ್ರಾಜ್ಯಶಾಹಿ ನುಸುಳುವಿಕೆಯ ವಿರುದ್ದ ಹೋರಾಡಲು ಅದು ಮಾರ್ಗದರ್ಶನ ಮಾಡಿದೆ. ಮಹಿಳೆಯರ, ದಲಿತರ, ಆದಿವಾಸಿಗಳ ಮತ್ತು ಸಾಮಾಜಿಕ ದಮನಕ್ಕೊಳಗಾದವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ಅದು

ಸಹಾಯಕವಾಗಿದೆ. ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಕೇಂದ್ರ–ರಾಜ್ಯ ಸಂಬಂಧಗಳನ್ನು ಬದಲಾಯಿಸಲು ನಡೆಸಿದ ಹೋರಾಟಗಳಿಗೆ ಪಕ್ಷ ಒಂದು ಅಚಲ ಶಕ್ತಿಯಾಗಿ ಕೆಲಸ ಮಾಡಿದೆ.

6. ನವ–ಉದಾರವಾದಿ ನೀತಿಗಳನ್ನು ವಿರೋಧಿಸಲು ಶಕ್ತಿಶಾಲಿಯಾದ ಐಕ್ಯ ವೇದಿಕೆಯೊಂದನ್ನು ರೂಪಿಸುವುದು ಪಕ್ಷದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ಕರೆಯಾಗಿತ್ತು.1991 ರಿಂದ ಈಚೆಗೆ ನಡೆದ 15 ಅಖಿಲ ಬಾರತ ಮಟ್ಟದ ಮುಷ್ಕರಗಳು ಟ್ರೇಡ್ ಯೂನಿಯನ್ ಐಕ್ಯತೆಯ ದ್ಯೋತಕವಾಗಿದೆ. ಕಳೆದ ಎರಡು ದಶಕಗಳಿಂದಲೂ ಎಡಶಕ್ತಿಗಳ ಐಕ್ಯತೆ ಮತ್ತು ನಾಲ್ಕು ಎಡ ಪಕ್ಷಗಳ ನಡುವಿನ ಹೊಂದಾಣಿಕೆ ಮುಂದುವರಿಯುತ್ತಿದೆ ಹಾಗೂ ಬಲಗೊಳ್ಳುತ್ತಿದೆ. ಈ ಎರಡೂವರೆ ದಶಕಗಳ ಅವಧಿಯಲ್ಲಿ ವಿಕಾಸಗೊಂಡ ರಾಜಕೀಯ–ಕಾರ್ಯತಂತ್ರಾತ್ಮಕ ಧೊರಣೆಯು ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಎಡ ಪಕ್ಷಗಳ ನೇತೃತ್ವದ ಸರ್ಕಾರಗಳು ಅಧಿಕಾರಕ್ಕೆ ಬರುವಂತೆ ಮಾಡಿದೆ. ಪಶ್ಚಿಮ ಬಂಗಾಳದ ಎಡ ರಂಗದ ಸರ್ಕಾರವು ಭದ್ರವಾಗುವಂತೆ ಮಾಡಿದೆ. ಅಷ್ಟೇ ಅಲ್ಲದೆ, ಅದು ಸಿಪಿಐ(ಎಂ) ಒಂದು ಅತಿ ದೊಡ್ಡ ಎಡ ಶಕ್ತಿಯಾಗಿ ಹೊರಹೊಮ್ಮಿ ರಾಷ್ಟ್ರ ರಾಜಕಾರಣದಲ್ಲಿ ಪ್ರಭಾವಶಾಲಿಯಾಗಿ ಮಧ್ಯಪ್ರವೇಶ ಮಾಡುವಶಕ್ತಿ ಪಡೆಯುವಂತೆ ಮಾಡಿದೆ.

7. ಆದಾಗ್ಯೂ,ನಮ್ಮ ಪಕ್ಷವು ಸ್ವತಂತ್ರವಾಗಿ ಬೆಳೆಯಲು ನಮ್ಮ ರಾಜಕೀಯ–ತಂತ್ರಾತ್ಮಕ ಧೋರಣೆಯು ಎಷ್ಟರಮಟ್ಟಿಗೆ ನೆರವಾಯಿತು ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವ ಹೋರಾಟವನ್ನು ಎಷ್ಟರಮಟ್ಟಿಗೆಮುಂದೊಯ್ಯಿತು ಎಂಬುದುನಾವು ವಿಮರ್ಶಾತ್ಮಕವಾಗಿ ವಿಚಾರ ಮಾಡಬೇಕಾಗಿದೆ. ಈ ಎರಡೂವರೆ ದಶಕಗಳ ಅವಧಿಯಲ್ಲಿ ವಿಕಾಸಗೊಂಡ ರಾಜಕೀಯ–ತಂತ್ರಾತ್ಮಕ ಧೊರಣೆಯಲ್ಲಿ ಏನಾದರೂ ನ್ಯೂನತೆಗಳಿದ್ದವೇ ಅಥವಾ ನಾವೇ ಹಿಂದೆ ಬಿದ್ದಿದ್ದೆವೋ ಮತ್ತು ಇದೇ ಕಾರಣಗಳಿಂದಾಗಿ ಪಕ್ಷದ ಬೆಳವಣಿಗೆ ಕುಂಠಿತವಾಯಿತೇ ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವ ಕೈಂಕರ್ಯದಲ್ಲಿ ಪ್ರಗತಿ ಸಾಧಿಸಲು ನಾವು ಅಸಮರ್ಥರಾದೆವೋ ಎಂದು ಪರಿಶೀಲಿಸಬೇಕಾಗಿದೆ.

### ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಕಲ್ಪನೆ

8. ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಕಲ್ಪನೆಯನ್ನು, ಮೊದಲಬಾರಿಗೆ, ಹತ್ತನೇ ಮಹಾಧಿವೇಶನದಲ್ಲಿ ವಿಶದಪಡಿಸಲಾಯಿತು. ಅದಕ್ಕೂ ಮುನ್ನ 7 ರಿಂದ 9ನೇ ಮಹಾಧಿವೇಶನಗಳಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಪರ್ಯಾಯವಾಗಿ ಒಂದು ಪ್ರಜಾಸತ್ತಾತ್ಮಕ ರಂಗವನ್ನು ರೂಪಿಸುವ ಕರೆ ನೀಡಿದ್ದೆವು. ಹತ್ತನೇ ಮಹಾಧಿವೇಶನದಲ್ಲಿ ಅಂಗೀಕಾರವಾದ ರಾಜಕೀಯ ಗೊತ್ತುವಳಿಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಕಲ್ಪನೆಯನ್ನು ಹೀಗೆ ವಿವರಿಸಲಾಗಿತ್ತು:

*"ಈ ರಂಗವನ್ನು ರೂಪಿಸುವ ಉದ್ದೇಶವು ವ್ಯವಸ್ಥೆಯ ಚೌಕಟ್ಟಿನೊಳಗೆ ಬಂಧಿತರಾಗಿರುವ ಜನತೆಯ ಆಯ್ಕೆಯು ಎರಡು ಬೂರ್ಜ್ವಾ–ಭೂ ಮಾಲಕ ಪಕ್ಷಗಳಿಗೆ ಸೀಮಿತಗೊಂಡಿರುವುದನ್ನು ಕೊನೆಗೊಳಿಸುವುದು ಮತ್ತು ವರ್ಗಗಳ*

*ನಡುವೆ ಇರುವ ಬಲಾ ಬಲಗಳ ಸ್ವರೂಪದ ಬದಲಾವಣೆಯ ಪ್ರಯತ್ನದ ಒಂದು ಭಾಗವಾಗಿದೆ. ಎಲ್ಲ ಎಡ ಹಾಗು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಗ್ಗೂಡಿಸಿ, ಭವಿಷ್ಯದಲ್ಲಿ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜನತಾ ಪ್ರಜಾಪ್ರಭುತ್ವಕ್ಕಾಗಿ ಒಂದು ಮೈತ್ರಿಯನ್ನು ರೂಪಿಸುವ ನಿಟ್ಟಿನಲ್ಲಿ ಇದು ನಾಂದಿಯಾಗುತ್ತದೆ. ಎಡ ಮತ್ತು ಪ್ರಜಾಸತ್ತಾತ್ಮಕ ರಂಗವು ಕೇವಲ ಚುನಾವಣಾ ಉದ್ದೇಶಗಳಿಗಾಗಲಿ ಅಥವಾ ಮಂತ್ರಿಗಿರಿ ಪಡೆಯುವುದಕ್ಕಾಗಲಿ ರೂಪುಗೊಳ್ಳುವಂತದ್ದಲ್ಲ. ಅದು, ರಾಜಕೀಯ ಮತ್ತು ಆರ್ಥಿಕವಾಗಿ ತಕ್ಷಣಮುನ್ನುಗ್ಗುವ ಹಾಗೂ ಅರ್ಥವ್ಯವಸ್ಥೆಯನ್ನು ತಮ್ಮ ಮುಷ್ಠಿಯಲ್ಲಿಟ್ಟುಕೊಂಡಿರುವ ಪ್ರತಿಗಾಮಿ ವರ್ಗಗಳನ್ನು ಪ್ರತ್ಯೇಕಿಸಿ ಒಂಟಿಯಾಗಿಸುವ ಹೋರಾಟದ ಪಡೆಗಳ ಒಂದು ಮೈತ್ರಿ."*

9. ಹತ್ತನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಜನಸಮೂಹಗಳ ಹೋರಾಟಗಳನ್ನು ಚಾಲನೆಗೊಳಿಸುವ ಅವಶ್ಯಕತೆಯನ್ನು ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯತೆಗೆ ಬುನಾದಿ ಹಾಕುವ ಮುಖ್ಯವಾದ ಪಾತ್ರವನ್ನು ಸಾಮೂಹಿಕ ಸಂಘಟನೆಗಳು ನಿರ್ವಹಿಸುವ ಅವಶ್ಯಕತೆಯನ್ನು ಒತ್ತಿ ಹೇಳಿತ್ತು.

   *"ಎಡ ಹಾಗು ಪ್ರಜಾಪ್ರಭುತ್ವವಾದಿ ಪಕ್ಷಗಳು ಬೃಹತ್ ಸಾಮೂಹಿಕ ಸಂಘಟನೆಗಳನ್ನು ಸರ್ವಮಾನ್ಯಸಾಮಾನ್ಯ ಹೋರಾಟಗಳಿಗೆ ಸೆಳೆಯುವುದು ಸಾಧ್ಯವಾದಾಗ ಮಾತ್ರ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವು ಕಾರ್ಯಸಾಧುವಾಗುವ ಒಂದು ಸಾಧ್ಯತೆಯಿರುತ್ತದೆ."*

10. ಎರಡನೆಯದಾಗಿ, ನಿರ್ಣಯವು ಒಂದು ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮವನ್ನು ಜನರ ಮುಂದಿಡುವಂತೆನಿರ್ದೇಶಿಸಿತ್ತು:

   *"ಬೂರ್ಜ್ವಾ–ಭೂ ಮಾಲಕ ಪಕ್ಷಗಳ ಆಚಾರ ಮತ್ತು ವಿಚಾರಗಳಿಗೆ ತೀವ್ರವಾಗಿ ವಿರುದ್ಧವಾದ ಮತ್ತು ವಿಭಿನ್ನವಾದ ಹಾಗೂಒಂದು ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮವನ್ನು ಜನರ ಮುಂದಿಟ್ಟು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಹೋರಾಟದ ನಾಯಕತ್ವ ವಹಿಸಿ ಜನರುತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡಾಗ ಮಾತ್ರ ಜನರು ಬೂರ್ಜ್ವಾ–ಭೂಮಾಲಕ ಪಕ್ಷಗಳಿಂದ ದೂರ ಸರಿದು ಪರ್ಯಾಯ ನಾಯಕತ್ವವದ ಸುತ್ತ ಅಣಿನೆರೆಯಲು ಆರಂಭಿಸುತ್ತಾರೆ".*

11. ಮೂರನೆಯದಾಗಿ, ಸಂಘಟನೆ ಕುರಿತು 1978ರ ಸಾಲ್ಕಿಯಾ ಪ್ಲೀನಮ್‌ನಲ್ಲಿ ಅಂಗೀಕರಿಸಿದ್ದ ನಿರ್ಣಯವು ಪಕ್ಷದ ವಿಸ್ತರಣೆಯ ಬಗ್ಗೆ ಹೀಗೆ ಹೇಳಿತ್ತು:

   *"ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯತೆ ಬೆಸೆಯಲು ಹಿಂದೆಂದೂ ಕಾಣದ ಪ್ರಮಾಣದಲ್ಲಿ ಸಂಘಟನೆ ಹಾಗೂ ಎಲ್ಲ ದುಡಿಯುವ ವಿಭಾಗಗಳ ಹೋರಾಟಗಳು ಬೆಳೆಯಬೇಕಾಗುತ್ತದೆ. ....ಇದಕ್ಕಾಗಿ ಕಾರ್ಮಿಕ ವರ್ಗದಪಕ್ಷದ ಶಕ್ತಿಯ ಬೆಳವಣಿಗೆ ಅಗಾಧವಾಗಿರಬೇಕಾಗುತ್ತದೆ ಮತ್ತು ಅದು – ಬೇರೆ ಬೇರೆ ರಾಜ್ಯಗಳಲ್ಲಿಪಕ್ಷದ ಸದಸ್ಯರ ಸಂಖ್ಯೆ, ಅವರು ತೊಡಗಿರುವ ಸಮರಧೀರ ಚಟುವಟಿಕೆಗಳು ಹಾಗೂ ಸಾಮ್ರಾಜ್ಯಶಾಹಿ–ವಿರೋಧಿ, ಪಾಳೆಗಾರಿ–ವಿರೋಧಿ,ಗುತ್ತೇದಾರಿ–ವಿರೋಧಿ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆ ಅವರಿಗಿರುವ ಐಕ್ಯತೆ–ಇವುಗಳ ಮೇಲೆ*

*ಅವಲಂಬಿತವಾಗಿರುತ್ತದೆ”*

12. ಕೊನೆಯದಾಗಿ,ಹತ್ತನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಹೀಗೆ ಧೃಢವಾಗಿ ಹೇಳಿತ್ತು:

*“ಕಾರ್ಮಿಕ ವರ್ಗದ ತನ್ನದೇ ಆದ ರಾಜಕೀಯ ಚಟುವಟಿಕೆ ಹಾಗೂ ಅದರ ಪಕ್ಷದ ರಾಜಕೀಯ ಚಟುವಟಿಕೆ ಮತ್ತು ಅದರ ವೃದ್ಧಿಸುತ್ತಿರುವ ಶಕ್ತಿಯು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ರಂಗವನ್ನು ಕಟ್ಟಲು ಅವಶ್ಯವಾಗಿದೆ.”*

ಜೊತೆ ಜೊತೆಯಲ್ಲಿ, ಬೂರ್ಜ್ವಾ ಮತ್ತು ಪೆಟ್ಟಿ ಬೂರ್ಜ್ವಾ ಸಿದ್ಧಾಂತಗಳ ವಿರುದ್ಧ ಕಾರ್ಮಿಕ ವರ್ಗದ ಸಿದ್ಧಾಂತವನ್ನು ಎತ್ತಿ ಹಿಡಿಯಲು ರಂಗದ ಇತರ ಪ್ರತ್ಯೇಕ ಅಂಗಗಳೊಂದಿಗೆ ಸೈದ್ಧಾಂತಿಕ ಹೋರಾಟಗಳೂ ನಡೆಯಬೇಕಾಗುತ್ತವೆ,

**ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಇಳಿಮುಖ**

13. ನಮ್ಮ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯು ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವ ನಿಟ್ಟಿನಲ್ಲಿ ನಮ್ಮ ಪ್ರಯತ್ನಗಳನ್ನು ಒಯ್ಯುವಲ್ಲಿ ನೆರವಾಯಿತೇ ಎಂಬುದನ್ನು ಪರಾಮರ್ಶಿಸಬೇಕಾಗಿದೆ. ಹತ್ತನೇ ಮಹಾಧಿವೇಶನದ ಸಮಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಘೋಷಣೆ ಪ್ರಕಟಿಸಿದಾಗ, ಪಶ್ಚಿಮ ಬಂಗಾಳದಲ್ಲಿ ಎಡ ರಂಗ ಇತ್ತು, ತ್ರಿಪುರಾದಲ್ಲಿ ಎಡ ರಂಗ ಇತ್ತು, ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಮೈತ್ರಿಕೂಟವು ನಂತರ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವಾಗಿ ಮಾರ್ಪಾಡಾಯ್ತು. ಇವುಗಳು, ರಾಷ್ಟ್ರೀಯ ಮಟ್ಟದಲ್ಲಿ ರೂಪಿಸಬೇಕೆಂದಿದ್ದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಆಂಶಿಕ ಅಭಿವ್ಯಕ್ತಿಗಳಾಗಿದ್ದವು. ಮೂರೂವರೆ ದಶಕಗಳ ನಂತರವೂ ನಾವು ಈ ರಾಜ್ಯಗಳಲ್ಲಿದ್ದ ರಂಗಗಳಿಂದ ಆಚೆ ಬೆಳೆಯಲಿಲ್ಲ. ವಾಸ್ತವವಾಗಿ ಯಾವ ಅಖಿಲ ಭಾರತ ಮಟ್ಟದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ರೂಪಗೊಳ್ಳಬೇಕಿತ್ತೋ ಅಲ್ಲಿ ಯಾವುದೇ ಪ್ರಗತಿಯಾಗಲಿಲ್ಲ.

14. ಈ ಪರಿಸ್ಥಿತಿಗೆ ಕಾರಣಗಳನ್ನು ನಾವು ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಗಳೊಳಗೇ ಹುಡುಕಬೇಕು. ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯ ಬಗ್ಗೆ ನಾವು ಹದಿಮೂರನೆ ಮಹಾಧಿವೇಶನ(1988)ದಿಂದಲೂ ಪ್ರಸ್ತಾಪ ಮಾಡುತ್ತಲೇ ಇದ್ದೇವೆ. ಸದ್ಯದ (ಆ ಸಮಯದಲ್ಲಿ) ಪರಿಸ್ಥಿತಿಗನುಗುಣವಾಗಿ ಒಂದು ಕಾಂಗ್ರೆಸ್ಸೇತರ ಜಾತ್ಯಾತೀತ ಪರ್ಯಾಯ ರಚಿಸುವ ತತ್‌ಕ್ಷಣದ ಅಗತ್ಯ ಮತ್ತು ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವ ಜವಾಬ್ದಾರಿಗಳ ನಡುವೆ ಒಂದು ಭಿನ್ನತೆ ಗುರುತಿಸಿದೆವು. ಹದಿನೈದನೇ ಮಹಾಧಿವೇಶನದ ಹೊತ್ತಿಗೆ ನಾವು ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯ ಘೋಷಣೆ ಪ್ರಕಟಿಸಿದೆವು. ಆ ಹೊತ್ತಿಗಾಗಲೆ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವು ದೂರದ ಗುರಿ ಎಂದೂ ಮತ್ತು ಸಾಕಾರಗೊಳ್ಳದ ಘೋಷಣೆ ಎಂದೂ ನಾವು ಹೆಚ್ಚು ಕಡಿಮೆ ತೀರ್ಮಾನಿಸಿದ್ದೆವು, ಹನ್ನೊಂದನೆ ಮಹಾಧಿವೇಶನವೂ ಇದನ್ನು ಪುನರುಚ್ಚರಿಸಿತ್ತು. ಅಂತೂ ಇಂತೂ ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವ ಪ್ರಯತ್ನವು ಒಂದು ಪ್ರಚಾರದ ಘೋಷಣೆಯ ಮಟ್ಟಕ್ಕೆ ಇಳಿಯಿತು. ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಮೈತ್ರಿಕೂಟವು

ಹೊಸ ಮಧ್ಯಂತರದ ಘೋಷಣೆಯಾಯ್ತು. ಬಿಜೆಪಿಯನ್ನು ದೂರ ಇಟ್ಟು ಕಾಂಗ್ರೆಸ್ಸೇತರ ಜಾತ್ಯಾತೀತ ಬೂರ್ಜ್ವಾ ಪಕ್ಷಗಳನ್ನು ರಾಜೀವ್ ಗಾಂಧಿ ಸರ್ಕಾರದ ವಿರುದ್ಧ ಅಣಿನೆರಸಲು ಈ ಘೋಷಣೆ ಆರಂಭವಾಗಿತ್ತಾದರೂ, ನಂತರ ಅದು ಬಿಜೆಪಿಯತ್ತ ಗುರಿ ಮಾಡಿದ ಘೋಷಣೆಯಾಗಿ ಪರಿಣಮಿಸಿತು. ಇದೇ ಆಧಾರದ ಮೇಲೆ ನಾವು 1996ರಲ್ಲಿ ಸಂಯುಕ್ತ ರಂಗ(ಯುನೈಟೆಡ್ ಫ್ರಂಟ್) ಸೇರಿದೆವು, ಆದರೆ ಸರ್ಕಾರದಲ್ಲಿ ಪಾಲ್ಗೊಳ್ಳಲಿಲ್ಲ.

**ಮೂರನೆ ಪರ್ಯಾಯ**

15. ಸಂಯುಕ್ತ ರಂಗದ (ಯುನೈಟೆಡ್ ಫ್ರಂಟ್) ಪತನದ ನಂತರ, ಹದಿನಾರನೆ ಮಹಾಧಿವೇಶನದಲ್ಲಿ(1998) ನಾವು ಒಂದು ಮೂರನೆ ಪರ್ಯಾಯದ ಘೋಷಣೆ ಮಾಡಿದೆವು. ಎಡ ಪಕ್ಷಗಳೊಂದಿಕೆ ಪುನಃ ಕೈ ಜೋಡಿಸಲೆಂಬ ಉದ್ದೇಶದಿಂದ ಜಾತ್ಯಾತೀತ ಬೂರ್ಜ್ವಾ ಪಕ್ಷಗಳನ್ನು(ಮುಖ್ಯವಾಗಿ ಪ್ರಾದೇಶಿಕ ಪಕ್ಷಗಳು) ಅಣಿ ನೆರೆಸಿದೆವು. ಮೂರನೆ ಪರ್ಯಾಯವು ಒಂದು ಸರ್ವ ಸಮ್ಮತಿಯಸಾಮಾನ್ಯ ಕಾರ್ಯಕ್ರಮದ ಆಧಾರದ ಮೇಲೆ ರೂಪುಗೊಂಡಿದೆ ಎಂದೂ ಮತ್ತು ಅದೊಂದು ಚುನಾವಣಾ ಮೈತ್ರಿಯಷ್ಟೇ ಆಗಬಾರದೆಂದು ನಾವು ಹದಿನೇಳನೆ ಮಹಾಧಿವೇಶನದಲ್ಲಿ ಸ್ಪಷ್ಟಪಡಿಸಿದೆವು. ಸರ್ವ ಸಮ್ಮತಿಯಸಾಮಾನ್ಯಕಾರ್ಯಕ್ರಮದ ಆಧಾರದಮೇಲೆ ಈ ಎಲ್ಲ ಪಕ್ಷಗಳನ್ನು ಒಟ್ಟಿಗೆ ತರುವುದು ಅದೆಷ್ಟು ಕಷ್ಟವೆಂಬುದು ನಮಗೆ ಹದಿನೆಂಟನೆ ಮಹಾಧಿವೇಶನದ ಹೊತ್ತಿಗೆ ಮನದಟ್ಟಾಗಿ, ಜಾತ್ಯಾತೀತ ಬೂರ್ಜ್ವಾ ಪಕ್ಷಗಳ ಮನೋಭಾವ ಬದಲಾಗದ ಹೊರತು ಮೂರನೆ ಪರ್ಯಾಯರಚಿಸುವತ್ತ ಸಾಗುವುದು ಸಾಧ್ಯವಾಗುವುದಿಲ್ಲವೆಂದು ಹೇಳಿದೆವು. ಜಂಟಿ ಚಳುವಳಿ ಮತ್ತು ಹೋರಾಟಗಳ ಮೂಲಕವಾಗಿಯೇ ಜಾತ್ಯಾತೀತ ಬೂರ್ಜ್ವಾ ಪಕ್ಷಗಳು ಸರ್ವ ಸಮ್ಮತಿಯಸಾಮಾನ್ಯ ಕಾರ್ಯಕ್ರಮಕ್ಕೆ ಒಪ್ಪುವಂತೆ ಪ್ರಭಾವಿಸಬಹುದು ಎಂದು ಹತ್ತೊಂಭತ್ತನೆ ಮಹಾಧಿವೇಶನದಲ್ಲಿ ಹೇಳಿದೆವು.

16. ಮೂರನೆ ಪರ್ಯಾಯ ಸಾಕಾರಗೊಳ್ಳುವುದು ಅಸಂಭವವೆಂದು ಮನದಟ್ಟಾಗಿ, ನಿರ್ದಿಷ್ಟ ಚುನಾವಣೆಗಳಲ್ಲಿ ಕಾಂಗ್ರೆಸ್ಸೇತರ ಜಾತ್ಯಾತೀತ ಬೂರ್ಜ್ವಾ ಪಕ್ಷಗಳ ಜೊತೆ ಚುನಾವಣಾ ಒಪ್ಪಂದ ಮಾಡಿಕೊಳ್ಳುವ ಮತ್ತು ಮೂರನೆ ಪರ್ಯಾಯ ಕಟ್ಟುವ ನಡುವಿನ ಮತ್ತೊಂದು ಭಿನ್ನತೆಯನ್ನು ಹದಿನೆಂಟನೆ ಮಹಾಧಿವೇಶನದ ರಾಜಕೀಯ ನಿರ್ಣಯದಲ್ಲಿ ಗುರುತಿಸಲಾಗಿತ್ತು. ಹೀಗಾಗಿ, ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಪ್ರಕ್ರಿಯೆಯನ್ನು ನಾವು ಕೈಗೆತ್ತಿಕೊಂಡಕಾರ್ಯಭಾರದ ಮೂರನೆ ಹಂತಕ್ಕೆ ವರ್ಗಾಯಿಸಲಾಯಿತು. ಒಂದು ನಿರ್ದಿಷ್ಟ ಚುನಾವಣೆಗೆ ಕಾಂಗ್ರೆಸ್ಸೇತರ ಜಾತ್ಯಾತೀತ ಬೂರ್ಜ್ವಾ ಪಕ್ಷಗಳ ಜೊತೆ ಚುನಾವಣಾ ಒಪ್ಪಂದ ಮಾಡಿಕೊಳ್ಳುವುದು ಮೊದಲ ಹಂತವಾಗಿತ್ತು.ಜಂಟಿ ಚಳುವಳಿ ಮತ್ತು ಹೋರಾಟಗಳನ್ನು ಕಟ್ಟುವ ಮೂಲಕ ಒಂದು ಸರ್ವ ಸಮ್ಮತಿಯಸಾಮಾನ್ಯ ಕಾರ್ಯಕ್ರಮ ರೂಪಿಸಿ, ಅದರ ಆಧಾರದಮೇಲೆ ಮೂರನೆ ಪರ್ಯಾಯ ರಚಿಸುವುದು ಎರಡನೆ ಹಂತವಾಗಿತ್ತು. ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ರಚಿಸುವುದು ಮೂರನೆಯ ಹಂತವಾಗಿತ್ತು.

## ಹದಿನೇಳನೆ ಮಹಾಧಿವೇಶನದ ಹಿನ್ನೋಟ

17. ನಮ್ಮ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ನು ಮರುಪರೀಕ್ಷೆಗೊಳಪಡಿಸುವಂತೆ 1996 ಮತ್ತು 1998ರ ಎರಡೂ ಲೋಕ ಸಭಾ ಚುನಾವಣೆ ವಿಮರ್ಶೆಗಳೂ ಒತ್ತಿಹೇಳಿದ್ದವು. ಕಾಂಗ್ರೆಸ್ಸಿನ ಸೋಲಿನಿಂದ ಪಕ್ಷಕ್ಕೆ ಪ್ರಯೋಜನವಾಗಲಿಲ್ಲ, ಬಿಜೆಪಿಗೆ ಹೆಚ್ಚಿನ ಲಾಭ ಸಿಕ್ಕಿತು. ಈ ವಿದ್ಯಮಾನವನ್ನು ಪರಿಗಣಿಸಿ ನಮ್ಮ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯುನ್ನು ಮರುಪರೀಕ್ಷೆಗೊಳಪಡಿಸುವಂತೆ ಆಗ್ರಹಿಸಲಾಗಿತ್ತು. ಈ ದಿಶೆಯಲ್ಲಿ ಕೆಲವು ಪ್ರಯತ್ನಗಳು ನಡೆದವು. ಪೊಲಿಟ್‌ಬ್ಯೂರೊ ವಿಮರ್ಶೆಯುಸಂಯುಕ್ತ ರಂಗ ತಂತ್ರಗಾರಿಕೆಗೆ ಸಂಬಂಧಿಸಿದಂತೆ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ನುಕಾರ್ಯಗತಗೊಳಿಸಿದ ಅಂಶಕ್ಕೆ ಸೀಮಿತವಾಗಿತ್ತು. ಹದಿನೇಳನೆ ಮಹಾಧಿವೇಶನದಲ್ಲಿ ಮಾಡಿದ ವಿಮರ್ಶೆಯುಬೂರ್ಜ್ವಾ ಪಕ್ಷಗಳೊಂದಿಗಿನ – ಅದರಲ್ಲೂ ವಿಶೇಷವಾಗಿ ಚುನಾವಣಾ ವಲಯದಲ್ಲಿ – ನಮ್ಮ ಸಂಯುಕ್ತ ರಂಗ ತಂತ್ರಗಾರಿಕೆಗೆಯ ಬಲಹೀನತೆ ಮತ್ತು ನ್ಯೂನತೆಗಳನ್ನು ಬೆರಳುಮಾಡಿ ತೋರಿಸಿತ್ತು.ನಮ್ಮ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯಂತೆ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ರಚನೆಯತ್ತಮುಂದುವರಿಯುವಂತೆ ಧೃಢವಾಗಿ ಹೇಳಿತ್ತು. ಅದು, ಆಗನಾವು ಕೈಗೊಳ್ಳಬೇಕಿದ್ದ ಒಂದು ವಿಶಾಲವಾದ ಎಡ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪಕ್ಷಗಳ ಸ್ಥೂಲ ಐಕ್ಯತೆ ಮತ್ತು ಮೂರನೆ ಪರ್ಯಾಯದಿಂದ ವಿಭಿನ್ನವಾದ್ದು ಎಂದೂ ಗುರುತಿಸಲಾಗಿತ್ತು. ಆದಾಗ್ಯೂ, ತತ್‌ಕಾಲದಲ್ಲಿ ನಾವು ಕೈಗೊಳ್ಳಬೇಕಿದ್ದ ಆ ಕೆಲಸವು ಪಕ್ಷದ ಸ್ವಂತ ಬೆಳವಣಿಗೆಗೆ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟಗಳ ಮುನ್ನಡೆಗೆ ಹಾನಿ ಉಂಟುಮಾಡುತ್ತಿದೆ ಎಂದೂ ವಿಮರ್ಶೆಯು ಗುರುತಿಸಿತ್ತು ಎಂಬುದು ಗಮನಾರ್ಹ.

18. ಅಲ್ಲಿ ಹೇಳಿದ್ದು ಹೀಗಿತ್ತು:

*"ತಕ್ಷಣದ ಕೆಲಸಗಳು ನಮ್ಮ ಆಚರಣೆಯ ಮುಖ್ಯ ಭಾಗವಾಗಿಬಿಟ್ಟಿವೆ, ಇದರಿಂದಾಗಿ ಆ ಹೊತ್ತಿನ ಪರಿಸ್ಥಿತಿಯ ಒತ್ತಡದಿಂದಾಗಿ, ಜರೂರಾಗಿ ಮಾಡಬೇಕಾಗಿರುವ ರಾಜಕೀಯ ಮತ್ತು ಚುನಾವಣಾ ಕೆಲಸಗಳು, ಮತ್ತುರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ವಯ ನಡೆಸಬೇಕಾಗಿರುವ ಪಕ್ಷದ ತನ್ನದೇ ಆದ ಚಟುವಟಿಕೆಗಳು, ಪಕ್ಷದ ಸ್ವತಂತ್ರ ಬೆಳವಣಿಗೆಗೆ ಕೊಡಬೇಕಿರುವ ಗಮನ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟಗಳ ಮುನ್ನಡೆ, ಇವುಗಳ ನಡುವೆಇರಬೇಕಾದ ಸಂಬಂಧ ತಾಳಮೇಳ ತಪ್ಪಿದೆ.".(ಹದಿನೇಳನೆ ಮಹಾಧಿವೇಶನದಲ್ಲಿ ಸಂಯುಕ್ತ ರಂಗ ತಂತ್ರಗಾರಿಕೆಗೆ ಸಂಬಂಧಿಸಿದಂತೆ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ವಿಮರ್ಶೆ)*

## ಕೈ ಬಿಟ್ಟ ಮೂರನೆ ಪರ್ಯಾಯ

19. ಆದಾಗ್ಯೂ, ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ವಯ ಮೂರನೆ ಪರ್ಯಾಯ ರಚನೆಯ ಜೊತೆಗೆ ನಮ್ಮ ತಂತ್ರಾತ್ಮಕ ಗುರಿಯಾದ ಎಡ ಮತ್ತು

ಪ್ರಜಾಸತ್ತಾತ್ಮಕ ರಂಗ ರೂಪಿಸುವ ಪ್ರಯತ್ನಗಳನ್ನುಪ್ರತಿಪಾದಿಸುವುದು ಮುಂದುವರೆಯಿತು. ನಾವು ಮೂರನೆ ಪರ್ಯಾಯದ ಕರೆ ಕೊಟ್ಟ ನಂತರ ಇಡೀ 15 ವರ್ಷಗಳ ಕಾಲ ಸತತ ಪ್ರಯತ್ನ ಮಾಡಿದರೂ ಕಾರ್ಯರೂಪದಲ್ಲಿ ಒಂದು ಪರ್ಯಾಯ ಹೊರಹೊಮ್ಮಲಿಲ್ಲ. ಕೊನೆಗೆ, 20ನೇ ಮಹಾಧಿವೇಶನದಲ್ಲಿ ಈ ಬಗ್ಗೆ ವಿವರವಾಗಿ ಪರಾಮರ್ಶೆ ನಡೆಸಿದನಂತರ, ಕಾಂಗ್ರೆಸ್ಸೇತರ ಜಾತ್ಯಾತೀತ ವಿರೋಧ ಪಕ್ಷಗಳನ್ನು ಒಂದು ಸರ್ವ ಸಮ್ಮತಿಯ ಕಾರ್ಯಕ್ರಮದ ಆಧಾರದ ಮೇಲೆ ಒಟ್ಟಿಗೆ ತರಲು ಆಗದಿದ್ದುದರಿಂದ ಆ ಘೋಷಣೆಯನ್ನು ಕೈ ಬಿಟ್ಟೆವು. ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ರಚಿಸುವುದೇ ನಮ್ಮ ಅತಿ ಮುಖ್ಯ ಪ್ರಯತ್ನವಾಗಿ ಮುಂದುವರೆಯುತ್ತದೆಂದು ಪುನರುಚ್ಚರಿಸಿದೆವು. ಚುನಾವಣಾ ತಂತ್ರಗಾರಿಕೆಗೆ ಸಂಬಂಧಿಸಿ, ಕೆಲವು ರಾಜ್ಯಗಳಲ್ಲಿ ಪಕ್ಷದ ಹಿತಾಸಕ್ತಿಗಳಿಗನುಗುಣವಾಗಿ ಜಾತ್ಯಾತೀತ ಬೂರ್ಜ್ವಾ ಪಕ್ಷಗಳೊಡನೆ ಮೈತ್ರಿ ಮಾಡಿಕೊಳ್ಳಬಹುದೆಂದು ರಾಜಕೀಯ ಗೊತ್ತುವಳಿ ಸ್ಪಷ್ಟಪಡಿಸಿದೆ.

20. ಹದಿನೈದನೆಯ ಮಹಾಧಿವೇಶನದ ನಂತರಒಂದೊಂದಾಗಿ ಹೊರಬಂದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಗಳು, ಅಂದಂದಿನ ಪರಿಸ್ಥಿತಿಗಳು ಮತ್ತು ಆಗ ಒದಗಿದ ಅಪಾಯಗಳನ್ನು ಎದುರಿಸಲು ನಾವು ಬಳಸಿಕೊಂಡ ನಮ್ಮ ಚುನಾವಣಾ ತಂತ್ರಗಾರಿಕೆ ಹಾಗೂ ಪಾರ್ಲಿಮೆಂಟರಿನಡೆಗಳನ್ನುರೂಪಿಸಲು ನೆರವಾದವು. ಈ ತಕ್ಷಣದ ಕೆಲಸಗಳಲ್ಲಿ ನಾವು ತೊಡಗಿದ್ದರಿಂದ ಪಕ್ಷದ ಸ್ವತಂತ್ರ ಬೆಳವಣಿಗೆ ಮುಂದೆ ಹೋಗಲಿಲ್ಲ. ಪಕ್ಷದ ಸ್ವಂತ ಬಲ ಹೆಚ್ಚಾಗದೆ ರಾಜಕೀಯ ಬಲಾಬಲಗಳಲ್ಲಿ ಬದಲಾವಣೆ ಸಾಧ್ಯವಿಲ್ಲ. ಈ ಬಲಾಬಲ ಆಳುವ ವರ್ಗಗಳ ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗಳ ಸುತ್ತ ಗಿರಕಿ ಹೊಡೆಯುತ್ತಿದೆ. 1996ರಲ್ಲಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಗಿಟ್ಟಿಸಿಕೊಳ್ಳದಂತೆ ಅದನ್ನು ದೂರ ಇಟ್ಟೆವು. 1998 ಮತ್ತು 1999ರಲ್ಲಿ ಅದು ಸರ್ಕಾರ ಮಾಡುವಲ್ಲಿ ಜಯಶಾಲಿಯಾಯಿತು. 2004ರ ಬಿಜೆಪಿ–ಎನ್‌ಡಿಎ ಸೋಲು ಕಾಂಗ್ರೆಸ್–ಯುಪಿಎ ಸರ್ಕಾರದ ಹತ್ತು ವರ್ಷಗಳ ಆಡಳಿತದಲ್ಲಿ ಪರಿಣಮಿಸಿತು. ತರುವಾಯ, 2014ರಲ್ಲಿ ಬಿಜೆಪಿ ಹೆಚ್ಚಿನ ಬಲದೊಂದಿಗೆ ಅಧಿಕಾರಕ್ಕೆ ಮರಳಿದೆ. ಇದು ಪಕ್ಷದ ಸ್ವತಂತ್ರ ಬಲಹೆಚ್ಚಿಸುವಲ್ಲಿ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಮುನ್ನಡೆಸುವಲ್ಲಿ ಆಗಿರುವ ವಿಫಲತೆಯನ್ನುಒತ್ತಿ ಹೇಳುತ್ತದೆ.

21. ನಾವು ಮೂರನೆ ಪರ್ಯಾಯದ ಬಗ್ಗೆ ಕಾಳಜಿವಹಿಸುತ್ತಿದ್ದಷ್ಟೂಅವಧಿಯಲ್ಲಿ ನಮ್ಮ ಪಕ್ಷದ ಸ್ವತಂತ್ರ ಬಲಬೆಳೆಯಲೇ ಇಲ್ಲ. ಇದು ವಾಸ್ತವ. ಈ ಅಂಶವೇ ನಾವು ಜಾತ್ಯಾತೀತ ಬೂರ್ಜ್ವಾ ಪಕ್ಷಗಳನ್ನು ಅಣಿ ನೆರೆಸುವ ಸಾಧ್ಯತೆಗಳನ್ನು ಶಿಥಿಲಗೊಳಿಸಿತು. ಈ ಅವಧಿಯಲ್ಲಿ ಪಕ್ಷದ ಸ್ವತಂತ್ರ ಬಲ ಬೆಳೆಯದೇ ಇದ್ದುದರಿಂದ ಈ ಪಕ್ಷಗಳ ಜೊತೆಯಲ್ಲಿ ರಾಜ್ಯ ಮಟ್ಟದ ಚುನಾವಣಾ ಮೈತ್ರಿ ಮಾಡಿಕೊಳ್ಳುವುದೂ ಸಹ ಕಷ್ಟವಾಯಿತು. ಇತ್ತೀಚಿನ ಲೋಕ ಸಭಾ ಚುನಾವಣೆಗಳಲ್ಲಿ ಕೆಲವು ಪ್ರಾದೇಶಿಕ ಬೂರ್ಜ್ವಾ ಪಕ್ಷಗಳಿಗೆ ನಮ್ಮೊಡನೆ ಯಾವುದೇ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವ ಮನಸ್ಸಿರಲಿಲ್ಲ. ನಾವು ಜಾತ್ಯಾತೀತ ಬೂರ್ಜ್ವಾ ಪಕ್ಷಗಳ ಕುರಿತು ಮಾತನಾಡುತ್ತಿದ್ದೇವೆ. ಆದರೆ, ಅಖಿಲ ಬಾರತ ಮಟ್ಟದ ವ್ಯಾಪ್ತಿ ಇರುವ ಜಾತ್ಯಾತೀತ

ಪಕ್ಷವೇ ಇಲ್ಲ. ಆದ್ದರಿಂದ, ಮೂರನೆ ಪರ್ಯಾಯ ರೂಪಿಸಲು ನಾವು ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಟ್ಟಿಗೆ ತರಬಯಸಿರುವ ಪ್ರಯತ್ನಗಳು ಮುಖ್ಯವಾಗಿ ಪ್ರಾದೇಶಿಕ ಪಕ್ಷಗಳತ್ತ ನೇರವಾಗಿ ಮುಖ ಮಾಡಿವೆ.

**ಪ್ರಾದೇಶಿಕ ಪಕ್ಷಗಳ ಪಾತ್ರ**

22. ಪ್ರಾದೇಶಿಕ ಪಕ್ಷಗಳು ಆ ಪ್ರದೇಶದ ಬೂರ್ಜ್ವಾ ಭೂ ಮಾಲಕ ವರ್ಗಗಳನ್ನು ಪ್ರತಿನಿಧಿಸುತ್ತವೆ ಎಂಬುದು 1960ರ ಕಾಲದಿಂದಲೂ ನಮ್ಮ ಗ್ರಹಿಕೆಯಾಗಿತ್ತು. ಈ ಪಕ್ಷಗಳಿಗೆ ಹಿರಿಯ ಬೂರ್ಜ್ವಾಗಳೊಡನೆ ಒಂದು ವೈರುಧ್ಯವಿತ್ತು ಆದ್ದರಿಂದ, ರಾಜ್ಯಗಳ ಹಕ್ಕುಗಳ ವಿಷಯವಾಗಿ ಈ ಪಕ್ಷಗಳನ್ನು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ವಿರುದ್ಧ ಒಟ್ಟುಗೂಡಿಸಬಹುದಿತ್ತು. ಈ ಪಕ್ಷಗಳ ಇತಿ ಮಿತಿಗಳನ್ನು 1967ರಲ್ಲಿ ಕೇಂದ್ರ ಸಮಿತಿಯ 'ಹೊಸ ಪರಿಸ್ಥಿತಿ ಮತ್ತು ಮಾಡಬೇಕಾಗಿರುವ ಕೆಲಸಗಳು'ದಸ್ತಾವೇಜಿನಲ್ಲಿ ಸ್ಪಷ್ಟಪಡಿಸಲಾಗಿತ್ತು.ಉದಾರೀಕರಣ ಮತ್ತು ನವ-ಉದಾರವಾದಗಳ ಪ್ರವೇಶದ ನಂತರ ಈ ಪಕ್ಷಗಳು ನಿರ್ವಹಿಸುತ್ತಿದ್ದ ಪಾತ್ರದಲ್ಲಿ ಬದಲಾವಣೆಗಳಾದವು. ಇದನ್ನು 16 ಮತ್ತು 17ನೆ ಮಹಾಧಿವೇಶನಗಳಲ್ಲಿ ಗಮನಿಸಲಾಗಿತ್ತು.

*"ಬಂಡವಾಳಶಾಹಿಯ ವಿಸ್ತರಣೆಯೊಂದಿಗೆಪ್ರಾದೇಶಿಕ ಬೂರ್ಜ್ವಾ-ಭೂಮಾಲಕ ವರ್ಗಗಳನ್ನು ಪ್ರತಿನಿಧಿಸುವ ಪ್ರಾದೇಶಿಕ ಪಕ್ಷಗಳ ದೃಷ್ಟಿಕೋನದಲ್ಲಿ ಬದಲಾವಣೆಯಾಗಿದೆ. ವಿದೇಶಿ ಬಂಡವಾಳದ ಬಗ್ಗೆ ಅವು ತಮ್ಮ ಮನೋಭಾವವನ್ನು ಬದಲಿಸಿಕೊಂಡಿವೆ. ಪ್ರಾದೇಶಿಕ ಬೂರ್ಜ್ವಾಗಳು ತಮ್ಮ ಹಿತಾಸಕ್ತಿಗಳನ್ನು ಮುಂದೊಯ್ಯಲು ಇದೊಂದು ಅವಕಾಶವೆಂದು ಕಾಣುತ್ತಿರುವುದರಿಂದ ಉದಾರೀಕರಣ ನೀತಿಗಳು ತಮಗೆ ಅನುಕೂಲಕರವೆಂದು ಭಾವಿಸಿವೆ.(ಹದಿನೇಳನೆ ಮಹಾಧಿವೇಶನ, 2002, ರಾಜಕೀಯ ನಿರ್ಣಯ)*

23. ಜಾಗತೀಕರಣದ ಪ್ರಭಾವದಿಂದಾಗಿ, ನವ-ಉದಾರೀ ನೀತಿಗಳಹಂತದಲ್ಲಿ, ಪ್ರಾದೇಶಿಕ ಬೂರ್ಜ್ವಾಗಳ ಕೆಲವು ಸಣ್ಣ ಗುಂಪುಗಳು ಹಿರಿಯ ಬೂರ್ಜ್ವಾಗಳ ಪಡೆಗೆ ಸೇರಿವೆ. ಜೊತೆಗೆ, ಹಿರಿಯ ಬೂರ್ಜ್ವಾಗಳು ಮತ್ತು ಇತರ ಬೂರ್ಜ್ವಾಗಳ ನಡುವೆ ವೈರುಧ್ಯ ಮಸುಕಾಗಿದೆ. ಇದರ ಪರಿಣಾಮವಾಗಿ ನವ-ಉದಾರೀ ನೀತಿಗಳನ್ನು ಪ್ರಾದೇಶಿಕ ಪಕ್ಷಗಳು ಅಪ್ಪಿಕೊಂಡಿರುವುದನ್ನು ಕಂಡಿದ್ದೇವೆ. ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ನೀತಿಗಳ ವಿರುದ್ಧವಾಗಿ ಯಾವುದೇ ಜಂಟಿ ವೇದಿಕೆಗೆ ಬರಲು ಈ ಪಕ್ಷಗಳಿಗೆ ಮನಸ್ಸಿಲ್ಲ. ಅಷ್ಟೇಅಲ್ಲದೆ, ಅವು ಗ್ರಾಮೀಣ ಶ್ರೀಮಂತರನ್ನು ಪ್ರತಿನಿಧಿಸುತ್ತಿರುವುದರಿಂದ ಬಡ ರೈತರ ಹಾಗೂ ಕೃಷಿ ಕೂಲಿಕಾರರ ಬಗ್ಗೆ ಅವರ ದೃಷ್ಟಿಕೋನ ಬೇರೆಯೇ ಆಗಿದೆ. ತಮ್ಮ ಸ್ವಾರ್ಥಸಾಧನೆಗಾಗಿ ಬಿಜೆಪಿ ಅಥವಾ ಕಾಂಗ್ರೆಸ್‌ನ ಜೊತೆ ಮೈತ್ರಿ ಮಾಡಿಕೊಳ್ಳುವ ಸಮಯಸಾಧಕತನವನ್ನು ಸತತವಾಗಿ ತೋರಿಸಿವೆ. ಇಷ್ಟೆಲ್ಲಾ ಆದರೂ ಒಂದು ಸಮಾನವಾದ ಪರ್ಯಾಯನೀತಿಗಳ ಆಧಾರದ ಮೇಲೆ ರಾಷ್ಟ್ರ ಮಟ್ಟದಲ್ಲಿ ಅವರನ್ನು ಅಣಿ ನೆರೆಸಬಹುದೆಂಬ ಹಾದಿಯಲ್ಲಿ ಹೋಗುತ್ತಲೇ ಇದ್ದೇವೆ. ಇದು ಅವಾಸ್ತವಿಕ ಮತ್ತು ತಪ್ಪೆಂದು ಸಾಬೀತಾಗಿದೆ.

**ಸಂಯುಕ್ತ ರಂಗ ತಂತ್ರಗಾರಿಕೆ**

24. ಏಳನೆ ಮಹಾಧಿವೇಶನದ ಸಮಯದಿಂದಲೂ ಐಕ್ಯ ಕಾರ್ಯಾಚರಣೆಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಲೇಬಂದಿದ್ದೇವೆ. ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಐಕ್ಯ ಕಾರ್ಯಾಚರಣೆಗಳು ಹಾಗೂ ಪಕ್ಷದ ಮಟ್ಟದಲ್ಲಿ ಮೂಡುವ ಜಂಟಿ ಚಳುವಳಿಗಳು, ಬೂರ್ಜ್ವಾ ಪಕ್ಷಗಳ ಪ್ರಭಾವಕ್ಕೊಳಗಾಗಿರುವ ಜನ ಸಾಮಾನ್ಯರನ್ನು ನಾವು ಸಂಪರ್ಕಿಸಿಲು ಮತ್ತು ಅವರನ್ನು ನಮ್ಮತ್ತ ತರಲು ಅನುವುಮಾಡಿಕೊಡುತ್ತವೆ. ಪ್ರಾದೇಶಿಕ ಪಕ್ಷಗಳ ಜೊತೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಕೆಲವು ಸಮಸ್ಯೆಗಳ ಮೇಲೆಐಕ್ಯ ಕಾರ್ಯಾಚರಣೆ ನಡೆಸಲು ನಮಗೆ ಯಾವುದೇ ಸಂಕೋಚವಿರಬಾರದು. ಈ ಅಂಶವೇ ನಾವು ಪ್ರಾಮುಖ್ಯತೆ ಕೊಡಬೇಕಿರುವುದು. ಇದು ಪಕ್ಷದ ಸ್ವತಂತ್ರ ಬೆಳವಣಿಗೆ ಮತ್ತು ಅದರ ಬಲ ಹೆಚ್ಚಿಸುವಲ್ಲಿ ನೇರವಾದ ಸಂಬಂಧ ಹೊಂದಿದೆ. ಅದಾಗ್ಯೂ, ಒಟ್ಟಾರೆಯಾಗಿ, ಜಾತ್ಯಾತೀತ ಬೂರ್ಜ್ವಾ ಪಕ್ಷಗಳ ಮನೋಭಾವದಿಂದಾಗಿ ಸಂಯುಕ್ತ ರಂಗ ತಂತ್ರಗಾರಿಕೆಯುಚುನಾವಣಾ ಕಣಕ್ಕೆ ಮಾತ್ರ ಸೀಮಿತಗೊಂಡಿದೆ. ನಮ್ಮ ಪ್ರಯತ್ನಗಳ ಬಳಿಕವೂ ಪ್ರಾದೇಶಿಕ ಪಕ್ಷಗಳು ಜಂಟಿ ಹೋರಾಟಗಳಿಗಾಗಲಿ ಅಥವಾ ಜನರ ಸಮಸ್ಯೆಗಳ ಮೇಲೆ ಐಕ್ಯ ಕಾರ್ಯಾಚರಣೆಗಾಗಲಿ ಬರುವುದಿಲ್ಲ. ಚುನಾವಣೆಗಳ ಸಮಯದಲ್ಲಿ, ಅದೂ ಕೂಡ ಚುನಾವಣಾ ಮೈತ್ರಿ ಏರ್ಪಡಲಿದೆ ಎನ್ನುವ ಸಂದರ್ಭದಲ್ಲಿ ಅವರು ಕೆಲವು ಜಂಟಿ ಪ್ರಚಾರಗಳಿಗೆ ಅಥವಾ ಸಭೆಗಳಿಗೆ ಬರುತ್ತಾರೆ.

25. ಕೆಲವು ಸಂದರ್ಭಗಳಲ್ಲಿ ಬಿಜೆಪಿಯ ವಿರುದ್ಧ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸುಸುವ ಪ್ರಯತ್ನಗಳು ಕಾಂಗ್ರೆಸ್ಸಿನ ಜೊತೆ ಹೊಂದಾಣಿಕೆ ಮಾಡಿಕೊಳ್ಳುವತ್ತ ಬಾಗಿವೆ ಇದು 2004ರ ಆಂಧ್ರ ಪ್ರದೇಶದ ವಿಧಾನ ಸಭಾ ಚುನಾವಣೆಗಳಲ್ಲಿ ಮತ್ತು ನಂತರದಲ್ಲಿ ಒಡಿಸ್ಸಾ, ಪಂಜಾಬ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕಾಂಗ್ರೆಸ್ಸಿನೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ಪರಿಣಮಿಸಿತು. ಇದು, ನಮ್ಮ ಹೋರಾಟದ ಒತ್ತು ಮುಖ್ಯವಾಗಿ ಬಿಜೆಪಿಯ ವಿರುದ್ಧವಾಗಿರಬೇಕು ಮತ್ತು ಕಾಂಗ್ರೆಸ್ಸಿನೊಂದಿಗೆ ಮೈತ್ರಿ ಅಥವಾ ಹೊಂದಾಣಿಕೆಯಾಗಲಿ ಕೂಡದು ಎಂಬ ಹದಿನೇಳನೆ ಮಹಾಧಿವೇಶನದ (2002) ಗ್ರಹಿಕೆಯ ವಿರುದ್ಧವಾಗಿದೆ.

**ರಾಜ್ಯಗಳಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ ರಚನೆ**

26. ರಾಷ್ಟ್ರ ಮಟ್ಟದಲ್ಲಿ ಒಂದು ಮೂರನೆ ಪರ್ಯಾಯ ಅಥವಾ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪರ್ಯಾಯ ರೂಪಿಸುವ ನಮ್ಮ ಪ್ರಯತ್ನಗಳು ಪಕ್ಷವು ಸ್ವತಂತ್ರವಾಗಿ ತನ್ನ ಪಾತ್ರ ನಿರ್ವಹಿಸಲು ಪೂರಕವಾಗಿಲ್ಲ. ರಾಷ್ಟ್ರ ಮಟ್ಟದಲ್ಲೋ ಅಥವಾ ರಾಜ್ಯಗಳ ಮಟ್ಟದಲ್ಲೋ (ಕೊನೆ ಪಕ್ಷ ನಾವು ದುರ್ಬಲವಾಗಿರುವ ರಾಜ್ಯಗಳಲ್ಲಿ) ನಾವು ಜಾತ್ಯಾತೀತ ಬೂರ್ಜ್ವಾ ಪಕ್ಷಗಳ ಜೊತೆಗೆ ಮೈತ್ರಿಯ ಬೆನ್ನಟ್ಟಿ ಹೋದ ಪ್ರಯತ್ನಗಳು ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪರ್ಯಾಯದ ಯೋಜನೆಗೆ ಅಡ್ಡಿಯಾದವು. ಸಧ್ಯದ ಪರಿಸ್ಥಿತಿಗಳ ಅವಶ್ಯಕತೆಗಳಿಗೆ ಉತ್ತರವಾಗಿ ನಮ್ಮ ಕಾರ್ಯತಂತ್ರಾತ್ಮಕ ಧೋರಣೆಯನ್ವಯ ಒಂದು ಮೂರನೆ ಪರ್ಯಾಯ ಕಟ್ಟುವ ನಮ್ಮ ಪ್ರಯತ್ನಗಳು, ನಾವು ಬೂರ್ಜ್ವಾ–ಭೂಮಾಲಕ ಪಕ್ಷಗಳ ನೀತಿಗಳು ಮತ್ತು ಆಚರಣೆಗಳಿಗೆ ಸ್ಪಷ್ಟವಾಗಿ

ಮತ್ತು ಪ್ರಬಲವಾಗಿ ವಿರುದ್ಧವಾದ ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮವೊಂದನ್ನು ಜನರ ಮುಂದಿಡುವ ಕಾರ್ಯವನ್ನು ಗೌಣವಾಗಿಸಿದವು. ಬೂರ್ಜ್ವಾ–ಭೂಮಾಲಕ ಪಕ್ಷಗಳ ನೀತಿಗಳು ಮತ್ತು ಆಚರಣೆಗಳಿಗೆ ಪೂರ್ಣವಾಗಿ ಭಿನ್ನವಾದ ಒಂದು ಕಾರ್ಯಕ್ರಮವನ್ನು ಜನರ ಮುಂದಿಟ್ಟು ಒಂದು ನಿರ್ದಿಷ್ಟ ಘೋಷಣೆಯ ಮೇಲೆ ಚಳುವಳಿ ಹಾಗೂ ಹೋರಾಟಗಳನ್ನು ನಡೆಸದ ಹೊರತು ಬೂರ್ಜ್ವಾ ಪಕ್ಷಗಳ ಪ್ರಭಾವಕ್ಕೊಳಗಾಗಿರುವ ಜನರ ಮನಸ್ಸು ಗೆಲ್ಲುವುದು ಸಾಧ್ಯವಿಲ್ಲ.

27. ಎಡ ರಂಗ ಅಸ್ತಿತ್ವದಲ್ಲಿರುವ ಹಾಗೂ ಪಕ್ಷವು ಬಲವಾಗಿರುವ ರಾಜ್ಯಗಳಲ್ಲಿ ಸಣ್ಣ ಬೂರ್ಜ್ವಾ ಪಕ್ಷಗಳ ಜೊತೆ ಹೋಗುವುದರಿಂದ ನಾವು ಮುಂದಿಡಬಯಸುವ ಎಡ ಪ್ರಜಾಸತ್ತಾತ್ಮಕ ಕಾರ್ಯಕ್ರಮದ ಪರ್ಯಾಯಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ. ಆದರೆ, ನಾವು ದುರ್ಬಲವಾಗಿರುವ ರಾಜ್ಯಗಳಲ್ಲಿ ಬಲಶಾಲಿಯಾಗಿರುವ ಪ್ರಾದೇಶಿಕ ಪಕ್ಷಗಳ ಜೊತೆ ಹೋಗುವುದರಿಂದ ನಮ್ಮ ಎಡ ಪ್ರಜಾಸತ್ತಾತ್ಮಕ ಕಾರ್ಯಕ್ರಮದ ಪರ್ಯಾಯ ಮುಂದಿಡಲು ಅಡಚಣೆಗಳು ಎದುರಾಗುತ್ತವೆ. ಆಗಾಗ್ಗೆ, ನಾವು ಯಾವ ವರ್ಗಗಳನ್ನು ಒಟ್ಟುಗೂಡಬಯಸುತ್ತೇವೆಯೋ ಆ ವರ್ಗಗಳ ಪರವಾದ ಹೋರಾಟವು ಪ್ರಾದೇಶಿಕ ಪಕ್ಷಗಳು ನಡೆಸುತ್ತಿರುವ ಸರ್ಕಾರಗಳ ವಿರುದ್ಧವಾಗಿಯೇ ಇರುತ್ತದೆ. ಕೆಲವು ರಾಜ್ಯಗಳಲ್ಲಿ, ಪ್ರಾದೇಶಿಕ ಪಕ್ಷವು ಬಿಜೆಪಿ ಅಥವಾ ಕಾಂಗ್ರೆಸ್ಸಿಗಿಂತಲೂ ಬಲವಾಗಿರುತ್ತದೆ. ನಮ್ಮ ಪ್ರಚಾರ ಮತ್ತು ಹೋರಾಟಗಳು ಅನೇಕವೇಳೆ ಅಂತಹ ಬಲಶಾಲಿ ಪ್ರಾದೇಶಿಕ ಪಕ್ಷದ ವಿರುದ್ಧವಾಗಿರಬೇಕಾಗುತ್ತದೆ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಮುನ್ನಡೆ ಸಾಧಿಸಿದ ರೀತಿಯಲ್ಲಿ ಬೇರೆ ರಾಜ್ಯಗಳಲ್ಲೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವಂತೆ ಕಾರ್ಯತಂತ್ರಾತ್ಮಕ ನಿರ್ದೇಶನ ಕೊಡಬೇಕು. ಮೈತ್ರಿಗಾಗಿ ಜಾತ್ಯಾತೀತ ಬೂರ್ಜ್ವಾ ಪಕ್ಷಗಳನ್ನು ಒಟ್ಟುಗೂಡಿಸುವ ರಾಷ್ಟ್ರ ಮಟ್ಟದ ನಿಲುವು ಅನೇಕ ವೇಳೆ ರಾಜ್ಯದಲ್ಲಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಗ್ಗೂಡಿಸುವ ಪ್ರಯತ್ನಗಳಿಗೆ ಅಡ್ಡಿಯಾಗುತ್ತದೆ.

28. ಪಕ್ಷದ ಹಿತದೃಷ್ಟಿಯಿಂದ ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವ ಅವಶ್ಯಕತೆ ಇರುವ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಪಕ್ಷವು ಸೂಕ್ತವಾದ ಚುನಾವಣಾ ತಂತ್ರಗಳನ್ನು ಅಳವಡಿಸಿಕೊಳ್ಳಬಹುದು. ಅದು, ಪಕ್ಷವು ಜಾತ್ಯಾತೀತ ಬೂರ್ಜ್ವಾ ಪಕ್ಷಗಳ ಜೊತೆ ರಾಷ್ಟ್ರ ಮಟ್ಟದ ಮೈತ್ರಿ ಮಾಡಿಕೊಳ್ಳುವಂತಹ ಅಖಿಲ ಭಾರತ ಮಟ್ಟದ ಯಾವುದೇ ಒಂದು ತಂತ್ರಗಾರಿಕೆಯಿಂದ ನಿರ್ದೇಶಿತವಾಗಿರಬಾರದು. ಚುನಾವಣಾ ಮೈತ್ರಿ ಏರ್ಪಡಿಸಿಕೊಳ್ಳುವಾಗ, ಹದಿನೇಳನೆ ಮಹಾಧಿವೇಶನದ ವಿಮರ್ಶಾ ವರದಿಯಲ್ಲಿ ತಿಳಿಸಿರುವ ಸರಿಯಾದ ದಾರಿ ನಮ್ಮ ಗಮನದಲ್ಲಿರಬೇಕು.

**ಹೊಂದಿಕೊಳ್ಳುವ ತಂತ್ರಗಾರಿಕೆ**

29. ರಾಜಕೀಯ ಪರಿಸ್ಥಿತಿಯಲ್ಲಿ ತ್ವರಿತ ಬದಲಾವಣೆಗಳಾಗಬಹುದು. ಬೂರ್ಜ್ವಾ ಪಕ್ಷಗಳ ನಡುವೆ ಮತ್ತು ಆಂತರಿಕವಾಗಿ ಹೊಸ ವೈರುಧ್ಯಗಳು ಉಂಟಾಗಬಹುದು. ರಾಜಕೀಯ ಪಕ್ಷಗಳು ಒಡೆದು ಹೋಗಬಹುದು ಅಥವಾ ಒಟ್ಟಿಗೆ ಸೇರಿ ಹೊಸ ಪಕ್ಷ ರಚಿಸಬಹುದು.

ಅಂತಹ ಪರಿಸ್ಥಿತಿಗಳನ್ನು ನಿಭಾಯಿಸಲು ಹೊದಾಣಿಕೆಯಾಗುವ ತಂತ್ರಗಾರಿಕೆ ವಿಕಾಸಗೊಳ್ಳಬೇಕು. ಐಕ್ಯ ಕಾರ್ಯಾಚರಣೆಗಳತ್ತ ಸಾಗುತ್ತಿರುವಾಗ, ನಿರ್ದಿಷ್ಟ ರಾಜಕೀಯ ಅಥವಾ ಸಾಮೂಹಿಕ ಸಮಸ್ಯೆಗಳ ಮೇಲೆ ಜಂಟಿ ವೇದಿಕೆಗಳನ್ನು ರಚಿಸಬಹುದು.

**ಸ್ವತಂತ್ರ ಶಕ್ತಿ**

30. ಕಳೆದ ಎರಡು ದಶಕಗಳಲ್ಲಿ ನಾವು ಕ್ರಮೇಣವಾಗಿ ಅಂಗೀಕರಿಸಿರುವ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಗಳಲ್ಲಿ ಪಕ್ಷದ ಸ್ವತಂತ್ರ ಶಕ್ತಿ ಹೆಚ್ಚಿಸುವ ಬಗ್ಗೆ ಒತ್ತಿ ಹೇಳುತ್ತಲೇ ಇದ್ದೇವೆ. ಮೂಲ ವರ್ಗಗಳ ನಡುವೆ ಕೆಲಸಮಾಡುವುದು ಹಾಗೂ ಪಕ್ಷದ ಚಟುವಟಿಕೆಗಳ ವಿಸ್ತರಣೆ, ಬಲವರ್ಧನೆ ಮತ್ತು ಅದರ ಪಾತ್ರದ ಮೂಲಕ ಪಕ್ಷವನ್ನು ಒಂದು ಬಲಶಾಲಿಯಾದ ಅಖಿಲ ಭಾರತ ಮಟ್ಟದ ಶಕ್ತಿಯಾಗಿ ಮಾಡಬಹುದು. ಸಾಲ್ಕಿಯಾ ಪ್ಲೀನಮ್‌ನಲ್ಲಿ ಒತ್ತಿ ಹೇಳಿರುವಂತೆ, ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ರಚನೆಗೆ ಇದು ಪೂರ್ವಾಪೇಕ್ಷೆಯಾಗಿರುತ್ತದೆ. ನಂತರ, 17ನೇ ಮಹಾಧಿವೇಶನದ ರಾಜಕೀಯ ಗೊತ್ತುವಳಿ ಹೀಗೆ ಸೂಚಿಸಿತ್ತು:

*"ತನ್ನ ಬಲವರ್ಧನೆ ಮಾಡಿಕೊಂಡು ಸಿಪಿಐ(ಎಂ) ಮುಂದುವರೆಯದ ಹೊರತು, ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವ ನಿಟ್ಟಿನಲ್ಲಿ ಹೋಗುವುದು ಸಾಧ್ಯವಿಲ್ಲ".*

31. ಪಕ್ಷದ ಸ್ವತಂತ್ರ ಬಲ ಹೆಚ್ಚಿಸುವ ನಿಟ್ಟಿನಲ್ಲಿ ಮುನ್ನಡೆ ಸಾಧಿಸುವಲ್ಲಿ ಅಸಮರ್ಥರಾಗಿದ್ದೇವೆ. ಕಳೆದ ಎರಡೂವರೆ ದಶಕಗಳಲ್ಲಿ ಪಕ್ಷದ ಸದಸ್ಯತ್ವ ಮತ್ತು ಅಖಿಲ ಬಾರತ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯತ್ವದಲ್ಲಿ ಸತತವಾದ ಬೆಳವಣಿಗೆಯಾಗಿದೆ. 14ನೆ ಮಹಾಧಿವೇಶನದ ಸಮಯದಲ್ಲಿ 5.8 ಲಕ್ಷ ಇದ್ದ ಪಕ್ಷದ ಸದಸ್ಯತ್ವವು 20ನೆ ಮಹಾಧಿವೇಶನದ ಸಮಯಕ್ಕೆ 10.45 ಲಕ್ಷಕ್ಕೆ ಏರಿಕೆಯಾಗಿದೆ. 14ನೆ ಮಹಾಧಿವೇಶನದ ಸಮಯದಲ್ಲಿ 2.88 ಕೋಟಿ ಇದ್ದ ಸಾಮೂಹಿಕ ಸಂಘಟನೆಗಳ ಒಟ್ಟು ಸದಸ್ಯತ್ವವು 20ನೆ ಮಹಾಧಿವೇಶನದ ಸಮಯಕ್ಕೆ 6.10 ಕೋಟಿಗೆ ಏರಿದೆ. ಈ ಏರಿಕೆಯು ಮುಖ್ಯವಾಗಿ ಮೂರು ರಾಜ್ಯಗಳಲ್ಲಿ (ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ) ಸಾಂದ್ರವಾಗಿದೆ. ಅದರಲ್ಲಿ, ಈ ಮೂರು ರಾಜ್ಯಗಳ ಪಕ್ಷದ ಸದಸ್ಯತ್ವವು ಈಗಿನ ಒಟ್ಟು ಸದಸ್ಯತ್ವದ ಶೇ.73ರಷ್ಟಿದೆ. ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ಒಟ್ಟು ಸದಸ್ಯತ್ವದಲ್ಲಿ ಶೇ.76 ಭಾಗ ಈ ಮೂರು ರಾಜ್ಯಗಳಲ್ಲಿದೆ. ಅದಲ್ಲದೆ, ಮುಂದಿನ ಎರಡು ದೊಡ್ಡ ರಾಜ್ಯಗಳಾದ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ (ವಿಭಜನೆಗೆ ಮೊದಲು) ಪಕ್ಷದ ಸದಸ್ಯತ್ವ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯತ್ವದಲ್ಲಿ ಆಗಿರುವ ಬೆಳವಣಿಗೆಯು ಪಕ್ಷವು ಜನರ ಮೇಲೆ ಬೀರಬಹುದಾದ ಪ್ರಭಾವ ಮತ್ತು ಪಕ್ಷದ ಸ್ವತಂತ್ರ ಬಲದಲ್ಲಿ ಹೆಚ್ಚಳವಾಗಿದೆ ಎಂದು ಸೂಚಿಸುವುದಿಲ್ಲ. ಚುನಾವಣಾ ರಂಗದಲ್ಲಿ(ಅಥವಾ ಮತಗಳಿಕೆಯಲ್ಲಿ) ನೋಡುವುದಾದರೆ, ಈ ಎರಡು ರಾಜ್ಯಗಳಲ್ಲಿ ಇಳಿಕೆಯಾಗಿದೆ.

32. ಇಂತಹ ಕಾರಣದಿಂದಾಗಿಯೇ 18ನೆ ಮಹಾಧಿವೇಶನದ ರಾಜಕೀಯ ಮತ್ತು ಸಂಘಟನಾ ವರದಿಯಲ್ಲಿ ಹೀಗೆ ಗಮನಿಸಿದ್ದೆವು:

*"ಪಕ್ಷದ ಸದಸ್ಯತ್ವದ ಬೆಳವಣಿಗೆ, ಸಾಮೂಹಿಕ ಸಂಘಟನೆಗಳ ಸದಸ್ಯತ್ವ, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಅಣಿ ನೆರೆಸುವಶಕ್ತಿ, ಇವು ಈ ಅವಧಿಯಲ್ಲಿ ಪಕ್ಷವು ವಿಸ್ತರಣೆ ಸಾಧಿಸಿದೆ ಎಂದು ತೋರಿಸುವುದಿಲ್ಲ. ಪಕ್ಷವು ಬಲವಾಗಿರುವ ರಾಜ್ಯಗಳಲ್ಲಿ ತನ್ನ ಬಲ ಉಳಿಸಿಕೊಂಡಿದೆ ಮತ್ತು ದುರ್ಬಲ ರಾಜ್ಯಗಳು ಹಾಗೂ ಪ್ರದೇಶಗಳಲ್ಲಿ ನಿಧಾನವಾಗಿ ಬಲ ಇಳಿಯುತ್ತಿದೆ । ಇದು ಒಟ್ಟಾರೆ ಪರಿಸ್ಥಿತಿ'"* ದುರ್ಬಲ ರಾಜ್ಯಗಳಲ್ಲಿನ ಪರಿಸ್ಥಿತಿ ಆಗಿನಿಂದಲೂ ಸುಧಾರಿಸಿಲ್ಲ. ಜೊತೆಗೆ, ಪಶ್ಚಿಮ ಬಂಗಾಲದಲ್ಲಿ ನಮಗಿದ್ದ ಬೆಂಬಲ ಇಳಿಯುತ್ತಿದೆ.

**ನವ ಉದಾರವಾದಿ ಬಂಡವಾಳಶಾಹಿಯ ಹಂತ**

33. ಕಾರ್ಮಿಕ ವರ್ಗ, ರೈತಾಪಿಜನ, ಕೃಷಿ ಕೂಲಿಗಾರರು ಮತ್ತಿತರ ದುಡಿಯುವ ಜನವಿಭಾಗಗಳನ್ನು ಅಣಿನೆರೆಸುವ ಮೂಲಕ ನವ ಉದಾರವಾದಿ ನೀತಿಗಳು ಮತ್ತು ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆಯ ವಿರುದ್ಧ ಹೋರಾಡಬೇಕಾದ ಕಾರ್ಯಭಾರದ ಬಗ್ಗೆ ನಾವು ಹೇಳುತ್ತಾ ಬಂದಿದ್ದೇವೆ. ಇದರ ಜತೆಯಲ್ಲಿ ಸೈದ್ಧಾಂತಿಕ ಹೋರಾಟ ಮತ್ತು ಸಾಮಾಜಿಕ ದಬ್ಬಾಳಿಕೆಯ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಈ ಹೋರಾಟ ಮತ್ತು ಚಳುವಳಿಗಳ ಮುಂದುವರಿಕೆಯ ಮೇಲೆಯೇ ಪಕ್ಷದ ಮುನ್ನಡೆ ಮತ್ತು ಸ್ವತಂತ್ರ ಬೆಳವಣಿಗೆ ನಿಂತಿದೆ.

34. 1991ರ ಉದಾರೀಕರಣ ಮತ್ತು ಆ ಮೇಲಿನ ನವ ಉದಾರೀಕರಣ ನೀತಿಗಳ ದಾಳಿಯಿಂದಾಗಿ ಬಂಡವಾಳಶಾಹಿ ಬೆಳವಣಿಗೆಯ ಮಾದರಿಯಲ್ಲಿತೀವ್ರ ಪಲ್ಲಟಗಳಾಗಿವೆ. ಉತ್ಪಾದನಾಪ್ರಕ್ರಿಯೆಗಳು ಮತ್ತು ಸಮಾಜದ ಮೇಲೆ ಮಾಹಿತಿ ತಂತ್ರಜ್ಞಾನವು ಅಗಾಧವಾದ ಪರಿಣಾಮವನ್ನು ಬೀರಿದೆ. ಈ ಹಂತದ ನವ–ಉದಾರವಾದಿ ಬಂಡವಾಳಶಾಹಿಯನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವಲ್ಲಿ ನಾವು ಹಿಂದೆಬಿದ್ದಿದ್ದೇವೆ. ಈ ತೀವ್ರತರದ ಬದಲಾವಣೆಗಳನ್ನು ಮತ್ತು ಜನಸಮುದಾಯದ ಮೇಲೆ ಅದು ಬೀರಿರುವ ಪರಿಣಾಮಗಳನ್ನು ವಿಶ್ಲೇಷಣೆಮಾಡದೆ ಕಾರ್ಮಿಕ ವರ್ಗದ, ರೈತಾಪಿ ಜನರ, ಯುವಜನರ, ವಿದ್ಯಾರ್ಥಿಗಳ ಮತ್ತಿತರ ಜನವಿಭಾಗಗಳ ವಿವಿಧ ಸಾಮೂಹಿಕ ಚಳುವಳಿಗಳನ್ನು ಬೆಳೆಸಲು ಅಗತ್ಯವಾದ ಸರಿಯಾದ ಘೋಷಣೆ ಹಾಗೂ ತಂತ್ರಗಳನ್ನು ರೂಪಿಸಲು ಸಾಧ್ಯವಿಲ್ಲ. "ವಿವಿಧ ಜನವಿಭಾಗಗಳನ್ನು ಬಾಧಿಸುತ್ತಿರುವ ಆಮೂಲಾಗ್ರ ನವ–ಉದಾರವಾದಿ ನೀತಿಗಳ ವಿರುದ್ಧ ಹೋರಾಡುವುದೇ ನಮ್ಮ ಪ್ರಮುಖ ಕೆಲಸ" (20ನೇ ಮಹಾಧಿವೇಶನ) ಎಂದು ಹೇಳಿದ್ದಾಗ್ಯೂ ಸಾಮೂಹಿಕ ಚಳುವಳಿಗಳು ಮತ್ತು ಬೆಳೆಯುತ್ತಿರುವ ವರ್ಗ ಹೋರಾಟಗಳಿಗೆ ಅಗತ್ಯವಾದ ತಂತ್ರಗಾರಿಕೆ ಮತ್ತು ಘೋಷಣೆ ರೂಪಿಸುವ ನಿಟ್ಟಿನಲ್ಲಿ ನಾವು ಸಾಕಷ್ಟು ಕೆಲಸ ಮಾಡಲಿಲ್ಲ. ಕೇಂದ್ರ ಸಮಿತಿಯ ಪುನರ್ವಿಮರ್ಶಾ ಸಮಿತಿಯು ತೀರ್ಮಾನಿಸಿದಂತೆ, ವಿವಿಧ ವರ್ಗಗಳಲ್ಲಿ ಮತ್ತು ರಂಗಗಳಲ್ಲಿ ಆಗಿರಬಹುದಾದ ಬದಲಾವಣೆಗಳ ನಿರ್ದಿಷ್ಟ ಅಧ್ಯಯನಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಇದರ ಆಧಾರದಲ್ಲಿ ಸರಿಯಾದ ತಂತ್ರಗಾರಿಕೆ ಮತ್ತು ಘೋಷಣೆಯನ್ನು ರೂಪಿಸಲು ನಮಗೆ ಸಾಧ್ಯವಾಗಬೇಕು ಮತ್ತು ಅವುಗಳನ್ನು 21ನೇ ಮಹಾಧಿವೇಶನದ ರಾಜಕೀಯ–ತಂತ್ರಗಾರಿಕೆಯಲ್ಲಿ ಅಳವಡಿಸಬೇಕು.

35. ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲಕರು, ಶ್ರೀಮಂತ ರೈತರು, ಗುತ್ತಿಗೆದಾರರು, ದೊಡ್ಡ ವ್ಯಾಪಾರಿಗಳು ಮುಂತಾದವರ ಗ್ರಾಮೀಣ ಸಿರಿವಂತರ ಕೂಟ ಒಂದಿದೆ ಎಂದು ನಾವು ಸಮಕಾಲೀನಗೊಳಿಸಿದ ಪಕ್ಷದ ಕಾರ್ಯಕ್ರಮದಲ್ಲಿ ಗಮನಿಸಿದ್ದೇವೆ. ಈ ವರ್ಗದ, ಮತ್ತು ಬಡರೈತರ ಹಾಗೂ ಕೃಷಿಕೂಲಿಗಾರರ ನಡುವಿನ ವೈರುಧ್ಯ ಹೆಚ್ಚಾಗಿದೆ. ಬಡರೈತರ ಮತ್ತು ಕೃಷಿಕೂಲಿಕಾರರ ಸಮಸ್ಯೆಗಳನ್ನು ಎತ್ತಿಕೊಂಡು ಆ ದಿಕ್ಕಿನಲ್ಲಿ ಚಳುವಳಿಯನ್ನು ಕೊಂಡೊಯ್ಯಲು ಅಥವಾ ರೂಪಿಸಲು ನಮಗೆ ಸಾಧ್ಯವಾಗಿದೆಯೇ? ನಾವು ಹಾಗೆ ಮಾಡಲು ಸಾಧ್ಯವಾಗದ ಕಾರಣಗಳಿಗೂ, ಆ ಗ್ರಾಮೀಣ ಸಿರಿವಂತರನ್ನು ಪ್ರತಿನಿಧಿಸುವ ಪ್ರಾದೇಶಿಕ ಬಂಡವಾಳಶಾಹಿ ಪಕ್ಷಗಳನ್ನು ನಮ್ಮ ಚುನಾವಣಾ ಮಿತ್ತರು ಎಂದು ನಾವು ಪರಿಗಣಿಸುತ್ತಿರುವುದಕ್ಕೂ ಸಂಬಂಧವಿದೆ ಎನ್ನಬಹುದು.

36. ಈ ನವ ಉದಾರವಾದಿ ನೀತಿಗಳನ್ನು ಆಳುವ ವರ್ಗಗಳ ಆಣತಿಯ ಮೇರೆಗೇ ಜಾರಿಮಾಡುತ್ತಿರುವುದು. ಯಾವುದೇ ಒಂದು ಕೇಂದ್ರ ಸರ್ಕಾರದಿಂದ ಪ್ರತಿಪಾದಿಸಲ್ಪಟ್ಟ ನೀತಿಗಳಲ್ಲ ಅವು. 1991ರಲ್ಲಿ ನರಸಿಂಹ ರಾವ್ ಸರ್ಕಾರದಿಂದ ಪ್ರಾರಂಭವಾಗಿ ನಂತರದ ಎಲ್ಲಾ ಕೇಂದ್ರ ಸರ್ಕಾರಗಳೂ ಅದೇ ಜಾಡನ್ನು ಹಿಡಿದಿವೆ. ಈ ಆಂಶಕ್ಕೆ ನಾವು ಆಗಿಂದಾಗ್ಯೆ ಹೆಚ್ಚು ಮಹತ್ವ ಕೊಡಲಾಗಲಿಲ್ಲ.ಕೋಮುವಾದಿ ಅಪಾಯವನ್ನು ನಿವಾರಿಸಿಕೊಳ್ಳುವ ಹೆಸರಿನಲ್ಲಿ, ಉದಾರೀಕರಣ ಮತ್ತು ಖಾಸಗೀಕರಣದ ಅದೇ ಜಾಡನ್ನು ಹಿಡಿದ ಸಂಯುಕ್ತ ರಂಗ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಭಾಗವಾಗಿ ನಾವಿದ್ದೆವು. ಆ ನಂತರ, 2004ರಲ್ಲಿ, ಯುಪಿಎ ಸರ್ಕಾರಕ್ಕೆ ನಾವು ಹೊರಗಿನಿಂದ ಬೆಂಬಲ ನೀಡಿದ್ದೂ ಸರಿಯಾದ ಹೆಜ್ಜೆಯೇ ಆಗಿತ್ತು. ಆದರೆ, ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮೂಲಕ ಯುಪಿಎ ಸರ್ಕಾರದ ಪ್ರಮುಖ ಒತ್ತು ಇದ್ದದ್ದು ನವ ಉದಾರವಾದಿ ನೀತಿಗಳನ್ನು ಜಾರಿಮಾಡುವುದೇ ಆಗಿತ್ತು.

37. ನವ–ಉದಾರವಾದಿ ಸುಧಾರಣೆಗಳ ವಿರುದ್ಧದ ಹೋರಾಟದ ಮತ್ತೊಂದು ಆಯಾಮ ಎಡ ನೇತೃತ್ವದ ಒಂದು ಸರ್ಕಾರದ ಧೋರಣೆ ಮತ್ತು ಅಂಗೀಕರಿಸಿದ ನೀತಿಗಳಿಗೆ ಸಂಬಂಧಪಟ್ಟಿದ್ದು. ನಮ್ಮ ನೇತೃತ್ವದಲ್ಲಿ ಬಹಳ ಕಾಲ ನಡೆದ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಆ ಪ್ರಶ್ನೆಯನ್ನು ಎದುರಿಸಬೇಕಾಯಿತು. ಕೈಗಾರಿಕೀಕರಣಕ್ಕಾಗಿ ಭೂಸ್ವಾಧೀನದ ವಿಷಯ ಎದುರಾಗಿ ಸಮಸ್ಯೆ ಉಂಟಾಯಿತು. ನಂದಿಗ್ರಾಮದಲ್ಲಿ ಭೂಸ್ವಾಧೀನದ ಪ್ರಸ್ತಾಪ ಮತ್ತು ಇತರೆ ಯೋಜನೆಗಳು ರೈತಸಮುದಾಯದ ಒಂದು ವಿಭಾಗವನ್ನು ದೂರಮಾಡಿತು. ಅಖಿಲ ಭಾರತ ಮಟ್ಟದಲ್ಲಿ ಅದನ್ನು ನವ–ಉದಾರವಾದಿ ಆಳ್ವಿಕೆಯ ಕಾರ್ಪೊರೇಟ್‌ಗಳ ಪರವಾಗಿನ ಭೂಸ್ವಾಧೀನದ ಕಾರ್ಯಸೂಚಿ ಎಂದು ಗ್ರಹಿಸಲಾಯಿತು. ಈ ವಿಷಯ ಪಶ್ಚಿಮ ಬಂಗಾಳದಲ್ಲಿ ನಮಗೆ ತೀವ್ರ ನಷ್ಟಕ್ಕೆ ಕಾರಣವಾಯಿತು ಮತ್ತು ಅಖಿಲ ಭಾರತ ಮಟ್ಟದಲ್ಲಿ ನಮ್ಮ ವರ್ಚಸ್ಸಿಗೆ ಧಕ್ಕೆಯುಂಟಾಯಿತು. ನವ ಉದಾರವಾದಿ ನೀತಿಗಳು ಜಾರಿಯಲ್ಲಿದ್ದಾಗ, ಎಡರಂಗ ಸರ್ಕಾರ ತನ್ನ ಅವಧಿಯ ಕೊನೆಯ ಹತ್ತು ವರ್ಷಗಳಲ್ಲಿ ಅನುಸರಿಸಿದ ನೀತಿಗಳನ್ನು ತೀಕ್ಷ್ಣ ವಿಮರ್ಶೆಗೆ ಒಳಪಡಿಸಬೇಕಾದ ಅವಶ್ಯಕತೆ ಇದೆ. ಭವಿಷ್ಯದಲ್ಲಿ ಅಗತ್ಯ ಬಿದ್ದಾಗ ನಾವು ಯೋಗ್ಯ ದಾರಿ ತುಳಿಯಲು ಸಾಧ್ಯವಾಗುವಂತೆ ನಾವು

ಸರಿಯಾದ ಪಾಠ ಕಲಿಯಬೇಕಾಗಿದೆ.

38. ಗುರುತಿಸಬೇಕಾದ್ದೇನೆಂದರೆ ಜಾಗತೀಕರಣ–ನವ–ಉದಾರವಾದಿ ಆಳ್ವಿಕೆಯ ಅವಧಿಯಲ್ಲಿನ ಪ್ರಕ್ರಿಯೆಯು ಎಡಪಂಥೀಯರಿಗೆ ಹೊಸ ಸಮಸ್ಯೆಗಳನ್ನು ತಂದೊಡ್ಡಿದೆ ಮತ್ತು ಕಾರ್ಮಿಕ ವರ್ಗ, ಕಾರ್ಷಿಕ, ವಿದ್ಯಾರ್ಥಿ ಮತ್ತು ಯುವಜನರ ಚಳುವಳಿಗಳನ್ನು ಬೆಳೆಸುವಲ್ಲಿ ಪ್ರತಿಕೂಲ ಪರಿಸ್ಥಿತಿಯನ್ನು ಸೃಷ್ಟಿ ಮಾಡಿದೆ. ಕೆಲಸ ಮಾಡುವಾಗ ಈ ಪ್ರಕ್ರಿಯೆಗಳನ್ನು ನಾವು ಅರ್ಥಮಾಡಿಕೊಳ್ಳಬೇಕಾದ ಮತ್ತು ಹೊಸ ಹಾಗೂ ಸೂಕ್ತವಾದ ತಂತ್ರಗಳನ್ನು ಮತ್ತು ಸಂಘಟನಾತ್ಮಕ ವಿಧಾನಗಳನ್ನು ಕೂಲಂಕುಷವಾಗಿ ಯೋಜಿಸಬೇಕಾದ ಅತ್ಯಗತ್ಯ ಇದೆ. ಪಕ್ಷದ ಸ್ವತಂತ್ರ ಬಲವನ್ನು ಬೆಳೆಸುವ ನಿಟ್ಟಿನಲ್ಲಿ ಇದೇ ಆಧಾರವಾಗಬೇಕು.

**ರಾಜಕೀಯಕಾರ್ಯತಂತ್ರಾತ್ಮಕ ಧೋರಣೆಯ ಜಾರಿಯಲ್ಲಿನ ದೋಷಗಳು**

39. ರಾಜಕೀಯಕಾರ್ಯತಂತ್ರಾತ್ಮಕ ಧೋರಣೆಯ ಅಂಶಗಳನ್ನು ಜಾರಿಮಾಡುವಾಗ, ಕೆಲವು ಸಂದರ್ಭಗಳಲ್ಲಿ ಅಂದಾಜು ಮಾಡುವಲ್ಲಿ ತಪ್ಪುಗಳಾಗಿವೆ ಮತ್ತು ದಾರಿತಪ್ಪಿದೆ. ತತ್ಕಾಲದ ತಂತ್ರಗಾರಿಕೆಯ ಆಧಾರದ ಮೇಲೆ ಹಲವಾರು ಸಾರ್ವತ್ರಿಕ ಚುನಾವಣೆಗಳಲ್ಲಿ ನಾವು ಚುನಾವಣಾ ತಂತ್ರಗಳನ್ನು ಅಳವಡಿಸಿಕೊಳ್ಳುತ್ತಿದ್ದೇವೆ. ಆನಂತರದಲ್ಲಿ ಇವುಗಳನ್ನು ಪುನರ್ಪರಿಶೀಲಿಸಲಾಗಿದೆ ಮತ್ತು ಕೆಲವು ತಪ್ಪು ಅಂದಾಜುಗಳನ್ನು ಹಾಗೂ ದೋಷಗಳನ್ನು ಗುರುತಿಸಲಾಗಿದೆ. ಉದಾಹರಣೆಗೆ, 1999ರ ಲೋಕಸಭಾ ಚುನಾವಣಾ ಪುನರ್ವಿಮರ್ಶೆಯಲ್ಲಿ, ಚುನಾವಣಾ ಪ್ರಚಾರದ ಸಮಯದಲ್ಲಿ ನಮ್ಮ ನಾಯಕತ್ವದ ಕೆಲವು ಘೋಷಣೆಗಳು ನಾವು ಕಾಂಗ್ರೆಸ್–ಪರ ನಿಲುವನ್ನು ಅಳವಡಿಸಿಕೊಂಡಿದ್ದೇವೆಂಬ ಭಾವನೆಯನ್ನು ಮೂಡಿಸಿದವು. ಇಂತಹ ಹೇಳಿಕೆಗಳು ನಾವು ಕಾಂಗ್ರೆಸ್ ಜತೆ ಸಹಕರಿಸಲು ಆಸಕ್ತರಾಗಿದ್ದೇವೆಂಬ ಮತ್ತು ಚುನಾವಣೆಯ ನಂತರ ಮೂರನೇ ಪರ್ಯಾಯ ಮರು–ನಿರ್ಮಾಣ ಮಾಡುವಲ್ಲಿ ಗಂಭೀರವಾಗಿಲ್ಲವೆಂಬ ಭಾವನೆಯನ್ನು ಮೂಡಿಸಿದವು ಎಂದು ಸ್ವವಿಮರ್ಶಾತ್ಮಕವಾಗಿ ಗಮನಿಸಲಾಗಿದೆ. ಚುನಾವಣೆಯ ಸಂದರ್ಭದಲ್ಲಿ ಪಕ್ಷದ ಕೇಂದ್ರವು ಕಾಂಗ್ರೆಸ್ಸಿನ ಶಕ್ತಿಯನ್ನು ವಾಸ್ತವಕ್ಕಿಂತ ಹೆಚ್ಚೆಂದು ಅಂದಾಜುಮಾಡಿತ್ತು. 2009ರ ಚುನಾವಣಾ ಸಮಯದಲ್ಲಿ, ನಾವು ಪುನರ್ವಿಮರ್ಶಿಸಿ, ರಾಷ್ಟ್ರ ಮಟ್ಟದಲ್ಲಿ ಒಂದು ನಂಬಲರ್ಹವಾದ ಚುನಾವಣಾ ಪರ್ಯಾಯ ಅಸ್ತಿತ್ವದಲ್ಲಿ ಇಲ್ಲದಿರುವಾಗ ಪರ್ಯಾಯ ಸರ್ಕಾರದ ಘೋಷಣೆ ಮಾಡಿದ್ದು ಸರಿಯಲ್ಲ ಎಂದು ತೀರ್ಮಾನ ಮಾಡಿದ್ದೇವೆ.

40. ನಮ್ಮ ತಂತ್ರಗಳನ್ನು ಜಾರಿಮಾಡುವಾಗ ಕೆಲವು ತಪ್ಪುಗಳಾಗಿವೆ. 1996–98 ಅವಧಿಯಲ್ಲಿ, ನಾವು ಸಂಯುಕ್ತ ರಂಗ ಸರ್ಕಾರವನ್ನು ಬೆಂಬಲಿಸುತ್ತಿದ್ದಾಗ, ಆ ಅವಧಿಯ ನಮ್ಮ ಪಾತ್ರವನ್ನು ವಿಮರ್ಶಿಸಿದ್ದೇವೆ ಮತ್ತು ಸರ್ಕಾರದ ಉದಾರೀಕರಣ ನೀತಿಗಳ ಪರವಾದ ಧೋರಣೆಯಿಂದ ನಾವು ಭಿನ್ನ ಎಂದು ಹೇಳುವಲ್ಲಿ ವಿಫಲರಾದೆವು ಎಂದು ನಿರ್ಧರಿಸಲಾಯಿತು. ಮುಂದುವರಿದು, ಸರ್ಕಾರವನ್ನು ಅಧಿಕಾರದಲ್ಲಿ ಇಡುವ ಕೆಲಸದಲ್ಲಿ ಮುಳುಗಿಹೋಗಿದ್ದರಿಂದ ಸಾಮೂಹಿಕ ಹೋರಾಟ ಮತ್ತು ಚಳುವಳಿಗಳನ್ನು ಕಟ್ಟಿ ಬೆಳೆಸುವ ಕೆಲಸದ ಕಡೆ ಗಮನ ಕೊಡಲಾಗಲಿಲ್ಲ.

41. 2008ರ ಜುಲೈನಲ್ಲಿ ಯುಪಿಎ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡ ವಿಷಯದ ಕುರಿತು, ಆ ತೀರ್ಮಾನವನ್ನು ಪುನರ್ವಿಮರ್ಶೆ ಮಾಡಿದ 20ನೇ ಮಹಾಧಿವೇಶನವು ಆ ಸಮಯದಲ್ಲಿ ಬೆಂಬಲ ಹಿಂತೆಗೆದುಕೊಳ್ಳದೆ ಬೇರೆ ದಾರಿ ಇರಲಿಲ್ಲ ಎಂದು ನಿರ್ಧರಿಸಿತು. ಆದರೆ ಅಕ್ಟೋಬರ್–ನವಂಬರ್‌ನಲ್ಲಿ ಸರ್ಕಾರ ಮಾತುಕತೆಗೆಂದು ಐ.ಎ.ಇ.ಎ. (ಅಂತರ‍್ರಾಷ್ಟ್ರೀಯ ಅಣು ಇಂಧನ ಏಜೆನ್ಸಿ) ಬಳಿ ಹೋದಾಗಲೇ ಬೆಂಬಲ ಹಿಂತೆಗೆಯಬೇಕಾಗಿತ್ತು. ಆಗ ಹಾಗೆ ಮಾಡದೇ ಇದ್ದದ್ದು ತಪ್ಪು. ತಮ್ಮ ರಕ್ಷಣಾ ಮೈತ್ರಿಕೂಟದ ಭಾಗವಾಗಿರುವ ಆ ಅಣು ಒಪ್ಪಂದವನ್ನು ಜಾರಿಮಾಡಲು ಆಳುವ ವರ್ಗಗಳ ಮತ್ತು ಅಮೆರಿಕಾ ಸಾಮ್ರಾಜ್ಯಶಾಹಿಯ ಗಟ್ಟಿನಿರ್ಧಾರ ಮತ್ತು ಸಾಮರ್ಥ್ಯವನ್ನು ಪೊಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ವಾಸ್ತವಕ್ಕಿಂತ ಕಮ್ಮಿಯೆಂದು ಅಂದಾಜು ಮಾಡಿತ್ತು. ಈ ವಿದ್ಯಮಾನಗಳ ಮೇಲೆ ಪ್ರಭಾವ ಬೀರುವಲ್ಲಿನ ನಮ್ಮ ಶಕ್ತಿ ಸಾಮರ್ಥ್ಯವನ್ನು ನಾವು ಹೆಚ್ಚು ಅಂದಾಜು ಮಾಡಿದ್ದೆವು ಕೂಡ. ಐ.ಎ.ಇ.ಎ. ಬಳಿ ಮಾತುಕತೆಗಾಗಿ ಸರ್ಕಾರ ಹೋಗಲು ಅನುವು ಮಾಡಿಕೊಟ್ಟಿದ್ದು ಮತ್ತು ಒಪ್ಪಂದ ಜಾರಿಮಾಡಲು ಮುಂದುವರಿಯುವುದಿಲ್ಲ ಎಂಬ ವಚನಕ್ಕೆ ಕಾಂಗ್ರೆಸ್ ಬದ್ಧವಾಗಿರುತ್ತದೆ ಎಂದು ನಿರೀಕ್ಷಿಸಿದ್ದು ತಪ್ಪೇ ಸರಿ.

42. ಬೇರೊಂದು ಸಂದರ್ಭದಲ್ಲಿ ಹೇಳಿದಂತೆ, ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ದಿಕ್ಕಿನಲ್ಲಿ ಚಟುವಟಿಕೆಗಳನ್ನು ರೂಪಿಸುವಲ್ಲಿ ದೌರ್ಬಲ್ಯಗಳಿದ್ದವು. ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಸ್ಪಷ್ಟ ನಿರ್ದೇಶನವನ್ನು ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಯಲ್ಲಿ ನೀಡಿದ್ದಾಗ್ಯೂ ಸಹ, ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ವಿಶೇಷವಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ, ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ತಳಮಟ್ಟದ ಪ್ರಯತ್ನಗಳು ಏನೇನೂ ಸಾಕಾಗಲಿಲ್ಲ. ಅದೇ ರೀತಿಯಲ್ಲಿ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಕೂಡ ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಯಲ್ಲಿ ನಿರ್ದೇಶನವಿದ್ದಾಗ್ಯೂ ಪಕ್ಷ ವಿಫಲವಾಗಿರುವುದನ್ನು ನಂತರದ ಪಕ್ಷದ ಮಹಾಧಿವೇಶನಗಳು ಗಮನಿಸಿವೆ.

43. ರಾಜಕೀಯಕಾರ್ಯತಂತ್ರಾತ್ಮಕ ಧೋರಣೆಯನ್ನುಜಾರಿಮಾಡುವಲ್ಲಿನ ಹಾಗೂ ಅದರಿಂದ ಹೊರಡುವ ಚುನಾವಣಾ ತಂತ್ರಗಳಲ್ಲಿನ ಅಂತಹ ಹಾದಿ ತಪ್ಪುವಿಕೆಗಳು ಮತ್ತು ತಪ್ಪುಗಳು ಕೂಡ ನಮ್ಮ ಕಾರ್ಯತಂತ್ರಾತ್ಮಕ ಗುರಿ ತಲುಪುವಲ್ಲಿ ನಮ್ಮ ಅಸಾಮರ್ಥ್ಯಕ್ಕೆ ಕಾರಣವಾಗಿವೆ.

**ಕೋಮುವಾದದ ವಿರುದ್ಧ ಹೋರಾಟ**

44. ನಮ್ಮ ದಾಳಿಯ ಮುಖ್ಯ ಗುರಿ, ಅದು ಅಧಿಕಾರದಲ್ಲಿದ್ದಾಗ, ಬಿಜೆಪಿಯ ವಿರುದ್ಧ ಇರಬೇಕು. ಆದರೆ ಅದರ ಅರ್ಥ ಕಾಂಗ್ರೆಸ್ ಜತೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವುದು ಅಂತ ಖಂಡಿತಾ ಅಲ್ಲ. ಅಂದರೆ ಕೋಮುವಾದಿಗಳ ವಿರುದ್ಧದ ನಮ್ಮ ಹೋರಾಟ ಅಂದ ಕೂಡಲೆ ನಮ್ಮ ಮುಖ್ಯ ಗುರಿಯಾದ ನವ ಉದಾರವಾದಿ ನೀತಿಗಳ ವಿರುದ್ಧದ ಹೋರಾಟ ಗೌಣವಾಗಬೇಕೆಂಬ ಧೋರಣೆ ಅಂತಲೂ ಅಲ್ಲ. ಕೋಮುವಾದದ ವಿರುದ್ಧ ಹೋರಾಟ ಮತ್ತು ಜನಸಮುದಾಯದ ಜೀವನೋಪಾಯಕ್ಕಾಗಿ ನವ ಉದಾರವಾದಿ ನೀತಿಗಳ ವಿರುದ್ಧ ಹೋರಾಟ ಮಾಡುವ

ಬಗೆಗಿನ ನಮ್ಮ ಧೋರಣೆಯಲ್ಲಿ ಯಾವುದೇ ರಾಜಿ ಇರಬಾರದು. ಆರ್.ಎಸ್.ಎಸ್. ಮತ್ತು ಬಿಜೆಪಿ ವಿರುದ್ಧದ ನಮ್ಮ ಹೋರಾಟವನ್ನು ಚುನಾವಣಾ ತಂತ್ರಕ್ಕಷ್ಟೆ ತಗ್ಗಿಸಬಾರದು. ಅದು ಕೋಮುವಾದದ ವಿರುದ್ಧ ನಾವು ಮಾಡುವ ಹೋರಾಟದ ಭಾಗವಾಗಬೇಕು. ಏಕೆಂದರೆ ಅದು ದುಡಿಯುವ ಜನರ ಐಕ್ಯತೆಯನ್ನು ಹಾಳುಗೆಡವುತ್ತದೆ. ನವ ಉದಾರವಾದಿ ನೀತಿಗಳು ಮತ್ತು ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆಯಿಂದ ಉಂಟಾದ ಅತೃಪ್ತಿಯನ್ನು ಮರೆ ಮಾಚುವ ಸಾಧನವನ್ನಾಗಿಯೂ ಆಳುವ ವರ್ಗ ಅದನ್ನು ಬಳಸುತ್ತದೆ. ಬಹುಸಂಖ್ಯಾತ ಕೋಮುವಾದದ ಹುಟ್ಟು ಅಲ್ಪಸಂಖ್ಯಾತ ಕೋಮುವಾದಕ್ಕೆ ಎಡೆ ಮಾಡುತ್ತದೆಯಾದ್ದರಿಂದ ಅದನ್ನು ಹಿಮ್ಮೆಟ್ಟಿಸಲೇಬೇಕು. ನಮ್ಮ ತಿಳುವಳಿಕೆಯ ಪ್ರಕಾರ, ನವ ಉದಾರವಾದಿ ನೀತಿಗಳು ಮತ್ತು ಕೋಮುವಾದದ ವಿರುದ್ಧ ನಮ್ಮ ಹೋರಾಟ ಒಂದಕ್ಕೊಂದು ತಳಕುಹಾಕಿಕೊಂಡಿದೆ. ಜನಸಮುದಾಯದ ಜೀವನೋಪಾಯಕ್ಕಾಗಿ ಕೈಗೆತ್ತಿಕೊಳ್ಳುವ ನಮ್ಮ ಹೋರಾಟ ಮತ್ತು ಕೋಮುವಾದಿ ಶಕ್ತಿಗಳು ಹಾಗೂ ಹಿಂದುತ್ವ ಸಿದ್ಧಾಂತದ ವಿರುದ್ಧದ ನಮ್ಮ ಹೋರಾಟ ಪರಸ್ಪರ ಪೂರಕವಾಗಿರಬೇಕು. ಹೀಗೆ ಹೋರಾಟಗಳನ್ನು ಮಿಳಿತಗೊಳಿಸುವುದರಿಂದ ಮಾತ್ರವೇ ಜನಸಮುದಾಯದ ಬೆಂಬಲವನ್ನು ಕೋಮುವಾದಿ ಶಕ್ತಿಗಳ ವಿರುದ್ಧ ಅಣಿನೆರೆಸಲು ಸಾಧ್ಯ. ಸಾಮಾಜಿಕ ದೃಷ್ಟಿಕೋನದಿಂದ, ಹಿಂದೂ ಕೋಮುವಾದದ ವಿರುದ್ಧದ ಹೋರಾಟವು ಜಾತಿ ವ್ಯವಸ್ಥೆ ಮತ್ತು ಮಹಿಳಾ ದೌರ್ಜನ್ಯದ ವಿರುದ್ಧದ ಹೋರಾಟವನ್ನೂ ಬೇಡುತ್ತದೆ, ಏಕೆಂದರೆ ಜಾತಿ ವ್ಯವಸ್ಥೆ ಮತ್ತು ಪುರುಷ–ಪ್ರಧಾನ ವ್ಯವಸ್ಥೆಗಳು ಹಿಂದುತ್ವ ಸಿದ್ಧಾಂತದಲ್ಲಿ ಅಂತರ್ಗತವಾಗಿವೆ.

45. ಕೋಮುವಾದಿ ಶಕ್ತಿಗಳು ಒಡ್ಡುತ್ತಿರುವ ಅಪಾಯವನ್ನು ನೋಡಿದಾಗ, ನಾವು ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಒಂದು ವಿಶಾಲ ಐಕ್ಯತೆಗಾಗಿ ಶ್ರಮಿಸಬೇಕಾಗಿದೆ. ಕೋಮುವಾದದ ವಿರುದ್ಧ ವ್ಯಾಪಕವಾಗಿ ಜನರನ್ನು ಸಜ್ಜುಗೊಳಿಸಲು ಇಂತಹ ಒಂದು ಜಂಟಿ ವೇದಿಕೆಗಳ ಅವಶ್ಯಕತೆ ಇದೆ. ಆದರೆ ಇಂತಹ ವೇದಿಕೆಗಳನ್ನು ಚುನಾವಣಾ ಮೈತ್ರಿಗೆ ಆಧಾರ ಎಂದು ಭಾವಿಸಬಾರದು.

**ಸಂಸದೀಯವಾದ**

46. ಸಂಸದೀಯವಾದವು ಒಂದು ಸುಧಾರಣಾವಾದಿ ಮನೋಭಾವ; ಅದು ಪಕ್ಷದ ಚಟುವಟಿಕೆಗಳನ್ನು ಚುನಾವಣಾ ಕೆಲಸಗಳಿಗೆ ಸೀಮಿತಗೊಳಿಸುತ್ತದೆ ಮತ್ತು ಚುನಾವಣಾ ಹೋರಾಟಗಳ ಮೂಲಕವೇ ಪಕ್ಷದ ಮುನ್ನಡೆಯನ್ನು ಸಾಧಿಸಬಹುದು ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಇದು ಸಾಮೂಹಿಕ ಚಳುವಳಿಗಳನ್ನು ಸಂಘಟಿಸುವ, ಪಕ್ಷ ಕಟ್ಟುವ ಹಾಗೂ ಸೈದ್ಧಾಂತಿಕ ಹೋರಾಟಗಳನ್ನು ನಡೆಸುವ ಕೆಲಸವನ್ನು ಕಡೆಗಣಿಸುವಂತೆ ಮಾಡುತ್ತದೆ. ಸಂಸದೀಯ ಹಾಗೂ ಸಂಸದಿಯೇತರ ಕೆಲಸಗಳನ್ನು ಒಂದುಗೂಡಿಸುವ ಮೂಲಕ ಸಾಮೂಹಿಕ ಚಳುವಳಿಗಳನ್ನು ಹಾಗೂ ರಾಜಕೀಯ ಹೋರಾಟವನ್ನು ಗಟ್ಟಿಗೊಳಿಸಬೇಕು.

47. ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಯಈ ಅಂಶಕ್ಕೆ ಸಾಕಷ್ಟು ಗಮನ ನೀಡಬೇಕು. ಪಕ್ಷದ ಸ್ವತಂತ್ರ ಪಾತ್ರವನ್ನು ಬಲಪಡಿಸಲು ಮತ್ತು ಎಡ ಹಾಗೂ

ಪ್ರಜಾಸತ್ತಾತ್ಮಕ ರಂಗ ಕಟ್ಟಲು ಗಮನ ಕೊಟ್ಟಿದ್ದಿದ್ದರೆ (ಚುನಾವಣಾ ಮೈತ್ರಿಯಾಗಿರದೆ ಅದು ವರ್ಗಾಧಾರಿತ ಮೈತ್ರಿ), ಆಗ ನಾವಿಂದು ಆಚರಣೆಯಲ್ಲಿ ನೋಡುತ್ತಿರುವ ಚುನಾವಣಾ ತಂತ್ರಗಳಿಗೆ ಒತ್ತುಕೊಡುವ, ಬಂಡವಾಳಶಾಹಿ ಪಕ್ಷಗಳ ಜತೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲು ಬಯಸುವ ಮತ್ತು ಕೇವಲ ಚುನಾವಣಾ ಸ್ವರೂಪದ ಪರ್ಯಾಯವನ್ನು ಬಿಂಬಿಸುವ ಕಾರ್ಯಗಳಿಂದ ತಪ್ಪಿಸಬಹುದಾಗಿತ್ತು.

48. ನವ ಉದಾರವಾದಿ ವ್ಯವಸ್ಥೆ ಮತ್ತು ರಾಜಕೀಯದೊಳಗೆ ಭಾರಿ ಹಣ ಹಾಗೂ ಕಾರ್ಪೊರೇಟ್ ಮಾಧ್ಯಮದ ಪ್ರವೇಶದಿಂದಾಗಿ ಸಂಸದೀಯ ಪ್ರಜಾಪ್ರಭುತ್ವವು ನಿರ್ಬಂಧಕ್ಕೊಳಗಾಗುತ್ತಿದೆ. ಇದನ್ನು ಗಮನಿಸಬೇಕಾದ ಅವಶ್ಯಕತೆ ಇದೆ. ಹೀಗೆಂದ ಮಾತ್ರಕ್ಕೆ ಚುನಾವಣಾ ರಂಗದಲ್ಲಿನ ನಮ್ಮ ಕೆಲಸವನ್ನು ಕಡೆಗಣಿಸಬಾರದು, ಅಥವಾ, ಅದರ ಮಹತ್ವವನ್ನು ತಗ್ಗಿಸಬಾರದು. ನಿಜ ಹೇಳಬೇಕೆಂದರೆ, ಪಕ್ಷವು ರಾಜಕೀಯವಾಗಿ ತನ್ನ ಸ್ವತಂತ್ರ ಪಾತ್ರವನ್ನು ಚುನಾವಣಾ ಸಮರದಲ್ಲಿ ಬಿಂಬಿಸಲು ಶ್ರಮವಹಿಸಬೇಕು. ಸ್ವತಂತ್ರ ಪಾತ್ರವನ್ನು ಮತ್ತು ಚಟುವಟಿಕೆಗಳನ್ನು ಬಲಗೊಳಿಸುವಲ್ಲಿನ ಮತ್ತು ಸಾಮೂಹಿಕ ಹಾಗೂ ವರ್ಗ ಹೋರಾಟಗಳನ್ನು ಬೆಳಸುವಲ್ಲಿನ ದೌರ್ಬಲ್ಯದಿಂದಾಗಿ ಚುನಾವಣಾ ರಂಗದಲ್ಲಿ ನಮ್ಮ ಕೆಲಸ ದುರ್ಬಲವಾಗಿದೆ ಹಾಗೂ ಅತ್ಯಲ್ಪ ಸಂಘಟನಾ ಸಾಮರ್ಥ್ಯ ಹೊಂದಿದೆ. ಆ ದೌರ್ಬಲ್ಯಗಳನ್ನು ಹೋಗಲಾಡಿಸಿಕೊಂಡರೆ ನಾವು ಸಂಘಟನಾತ್ಮಕವಾಗಿ ನಮ್ಮ ಪ್ರಭಾವವನ್ನು ಕ್ರೋಢೀಕರಿಸಲು ಸಾಧ್ಯವಿದೆ.

**ಒಟ್ಟು ಸಾರ**

49. ಕಾಲಕಾಲಕ್ಕೆ ರೂಪಿಸಿದ ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಯು ಆ ಸಂದರ್ಭದ ಸನ್ನಿವೇಶವನ್ನು ನಿಭಾಯಿಸುವಲ್ಲಿ ಮತ್ತು ಒಟ್ಟಾರೆಯಾಗಿ ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಎದುರಿಸಲು ಸರಿಯಾದ ಚುನಾವಣಾ ತಂತ್ರಗಳ ರೂಪಿಸುವಲ್ಲಿ ಸಹಾಯಕವಾಯಿತು. ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಯುಎಡ ಐಕ್ಯತೆಯನ್ನು ಬಲಪಡಿಸಲು ಹಾಗೂ ಎಡ ನೇತೃತ್ವದ ರಾಜ್ಯ ಸರ್ಕಾರಗಳನ್ನು ರಚಿಸಲು ಮತ್ತು ಕ್ರೋಢೀಕರಿಸಲು ಸಹಾಯಕವಾಯಿತು.

50. ಸಮಾಜದ ಹಾಗೂ ವರ್ಗಗಳ ಮೇಲೆ ನವ ಉದಾರವಾದಿ ಬಂಡವಾಳಶಾಹಿಯಿಂದಾದ ಪರಿಣಾಮಗಳನ್ನು ಸಮಗ್ರವಾಗಿ ಗ್ರಹಿಸುವಲ್ಲಿ ಉಂಟಾದ ವಿಳಂಬವು, ದುಡಿಯುವ ಜನರ ಹೋರಾಟಗಳನ್ನು ಹಾಗೂ ಚಳುವಳಿಗಳನ್ನು ಕಟ್ಟಲು ಅಗತ್ಯವಾದ ನಿರ್ದೇಶನ ಮತ್ತು ಒತ್ತು ನೀಡುವಲ್ಲಿನ ದೌರ್ಬಲ್ಯಕ್ಕೆ ಕಾರಣವಾಯಿತು.

51. ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಎಡ, ಪ್ರಜಾಪ್ರಭುತ್ವ ಹಾಗೂ ಜಾತ್ಯತೀತ ಪಕ್ಷಗಳ ಮೈತ್ರಿಕೂಟ ರಚಿಸುವ ಕೆಲಸಕ್ಕೆ ಹೊರಟು, ಒಂದು ಸಮಾನ ಕಾರ್ಯಕ್ರಮದ ಆಧಾರದಲ್ಲಿ ಮೂರನೇ ಪರ್ಯಾಯದಂತಹ ಮಧ್ಯಂತರ ರಂಗವಾಗುವಲ್ಲಿಗೆ ಬಂದು ತಲುಪಿತು. ಇದೊಂದು ವ್ಯರ್ಥ ಹುಡುಕಾಟವಾಗುತ್ತಾ, ಚಳುವಳಿಗಳನ್ನು ಹಾಗೂ ಹೋರಾಟಗಳನ್ನು ಬೆಳೆಸುವ ಆಧಾರದಲ್ಲಿ ಪಕ್ಷದ ಸ್ವತಂತ್ರ ಬಲವನ್ನು ಕಟ್ಟುವ ಕೆಲಸದಿಂದ ವಿಮುಖಗೊಳಿಸಿತು, ಕೆಲವು ಬಾರಿ ಆಗಿಂದಾಗಿನ ಸರ್ಕಾರಗಳ

ನವ ಉದಾರವಾದಿ ನೀತಿಗಳ ವಿರುದ್ಧ ಹೋರಾಡಬೇಕಾದ ಆದ್ಯತೆಯ ಮಹತ್ವವನ್ನು ತಗ್ಗಿಸಿತು.

52. ಒಂದು ಪ್ರಮುಖ ಪರಿಣಾಮವೇನೆಂದರೆ ಎಡ ಮತ್ತು ಪ್ರಜಾಪ್ರಭುತ್ವ ರಂಗವು ಸಾಧಿಸಬಹುದಾದ ಗುರಿ ತಲುಪುವುದರಿಂದ ಹಿಂದೆ ಉಳಿಯಬೇಕಾಯಿತು ಹಾಗೂ ಪ್ರಚಾರದ ಘೋಷಣೆಯಾಗಷ್ಟೇ ಉಳಿಯಬೇಕಾಯಿತು. ನವ ಉದಾರವಾದಿ ವ್ಯವಸ್ಥೆಯಿಂದಾಗಿ ನರಳುತ್ತಿರುವ ದುಡಿಯುವ ಜನರ ವಿವಿಧ ವಿಭಾಗಗಳನ್ನು ನಿರಂತರ ಹೋರಾಟಗಳಿಗೆ ಇಳಿಸುವ, ಸಂಯುಕ್ತ ಕಾರ್ಯಾಚರಣೆ ನಡೆಸುವ ಮತ್ತು ಕೋಮುವಾದದ ವಿರುದ್ಧ ಒಂದು ಸಂಯೋಜಿತ ಹೋರಾಟ ಮಾಡುವ ಮುಖ್ಯ ಗುರಿಯಿಂದ ಅದು ತಳಮಟ್ಟದಲ್ಲಿ ನಮ್ಮನ್ನು ವಿಮುಖಗೊಳಿಸಿತು.

**ಕೈಗೊಳ್ಳಬೇಕಾದ ಕ್ರಮಗಳು**

53. ರಾಜಕೀಯಕಾರ್ಯತಂತ್ರಾತ್ಮಕ ಧೋರಣೆಯ ವಿಮರ್ಶಾತ್ಮಕ ಪುನರ್ಪರೀಕ್ಷೆಯು ನಮ್ಮನ್ನು ಈ ಕೆಳಗಿನ ತೀರ್ಮಾನಗಳಿಗೆ ಕೊಂಡೊಯ್ಯಬೇಕು:

54. ಎಡ ಮತ್ತು ಪ್ರಜಾಸತ್ತಾತ್ಮಕ ರಂಗಕ್ಕೆ ಹಾಗೂ ಕಾರ್ಯಕ್ರಮಕ್ಕೆ ಅದರ ಹಿಂದಿರುವ ವರ್ಗಗಳನ್ನು ಅಣಿನೆರೆಸಲು ಇರುವ ಪ್ರಾಥಮಿಕತೆಯನ್ನು ಪುನಸ್ಥಾಪಿಸಬೇಕು. ಈ ರಂಗದ ಸ್ವರೂಪಕ್ಕೆ ಜೀವತುಂಬಲುನಾವು ಹೆಚ್ಚು ಗಮನ ಹರಿಸಬೇಕು (10ನೇ ಮಹಾಧಿವೇಶನದಲ್ಲಿ ಆ ಪ್ರಯತ್ನ ಮಾಡಲಾಗಿತ್ತು). ಇದರ ಭಾಗವಾಗಿ ನಾವು ಎಡ ಐಕ್ಯತೆಯನ್ನು ವಿಸ್ತರಿಸಬೇಕು ಮತ್ತು ಗಾಢವಾಗಿಸಬೇಕು.

55. ಪಕ್ಷದ ಸ್ವತಂತ್ರ ಪಾತ್ರವನ್ನು ಹೆಚ್ಚಿಸಲು ಮತ್ತು ಶಕ್ತಿಯನ್ನು ಹಾಗೂ ಸಾಮೂಹಿಕ ನೆಲೆಯನ್ನು ವಿಸ್ತರಿಸಲು ಆದ್ಯತೆ ನೀಡಬೇಕು.

56. ಕಾರ್ಮಿಕರ, ರೈತರ, ಕೃಷಿ ಕೂಲಿಕಾರರ ವರ್ಗ ಹೋರಾಟ ಮತ್ತು ಇತರೆ ಜನ ವಿಭಾಗದ ಸಾಮೂಹಿಕ ಚಳುವಳಿಗಳನ್ನು ಬೆಳೆಸಲು ನಿರ್ದಿಷ್ಟ ತಂತ್ರಗಳನ್ನು ಹಾಗೂ ಘೋಷಣೆಗಳನ್ನು ರೂಪಿಸಬೇಕು. ಬದಲಾವಣೆಗಳಾಗಿರುವುದನ್ನು ನಿರ್ದಿಷ್ಟವಾಗಿ ಅಧ್ಯಯನ ಮಾಡುವ ಆಧಾರದಲ್ಲಿ ಇದನ್ನು ಮಾಡಬೇಕು.

57. ಮುಂಬರುವ ಕಾರ್ಯತಂತ್ರಾತ್ಮಕ ಧೋರಣೆಯು ಹಿಂದುತ್ವ ಶಕ್ತಿಗಳ ಮತ್ತು ಕೋಮುವಾದಿ ಸಿದ್ಧಾಂತದ ವಿರುದ್ಧ ರಾಜಕೀಯ, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಸ್ತರದಲ್ಲಿ ನಡೆಸುವ ಹೋರಾಟಕ್ಕೆ ನಿರ್ದಿಷ್ಟ ನಿರ್ದೇಶನ ಮತ್ತು ಸಾರವನ್ನು ನೀಡಲು ಸಾಧ್ಯವಾಗಬೇಕು.

58. ಆ ರಾಜಕೀಯ ಕಾರ್ಯತಂತ್ರಾತ್ಮಕ ಧೋರಣೆಯುಜಾತಿ ದಬ್ಬಾಳಿಕೆ ಎದುರಿಸಲು ಹಾಗೂ ಐಡೆಂಟಿಟಿ ರಾಜಕೀಯ ಹಿಮ್ಮೆಟ್ಟಿಸಲು ನಿರ್ದಿಷ್ಟ ಮಾರ್ಗದರ್ಶನ ನೀಡಲು ಸಾಧ್ಯವಾಗಬೇಕು. ಮಹಿಳಾ ಹಕ್ಕುಗಳಿಗಾಗಿ ಮತ್ತು ಲೈಂಗಿಕ ದೌರ್ಜನ್ಯದ ವಿರುದ್ಧ ಹೋರಾಟಕ್ಕೆ ಹೆಚ್ಚು ಒತ್ತು ನೀಡಬೇಕು. ಸಾಮಾಜಿಕ ಸಮಸ್ಯೆಗಳನ್ನು ದೊಡ್ಡ ರೀತಿಯಲ್ಲಿ ಕೈಗೆತ್ತಿಕೊಳ್ಳಲು ಪಕ್ಷಕ್ಕೆ ಸಾಧ್ಯವಾಗಬೇಕು ಮತ್ತು ದಲಿತರು, ಆದಿವಾಸಿಗಳು ಹಾಗೂ ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ಅಗತ್ಯವಾದ ವಿಶೇಷ ಮಧ್ಯಪ್ರವೇಶವನ್ನು ಖಾತ್ರಿಪಡಿಸಬೇಕು.

59. ವರ್ಗ ಹಾಗೂ ಸಾಮೂಹಿಕ ಸಂಘಟನೆಗಳ ಸಂಯುಕ್ತ ಕಾರ್ಯಾಚರಣೆಗಳಿಗೆ ಮತ್ತು ಜನಸಮುದಾಯದ ಸಮಸ್ಯೆಗಳ ಕುರಿತು ಜಂಟಿ ವೇದಿಕೆಗಳನ್ನು ಹಾಗೂ ಸಂಯುಕ್ತ ಕಾರ್ಯಾಚರಣೆಗೆ ನಡೆಸುವ ಪಕ್ಷದ ಪ್ರಯತ್ನಗಳಿಗೆ ರಾಜಕೀಯ ತಂತ್ರಗಾರಿಕೆಯು ನಿರ್ದೇಶನ ನೀಡಬೇಕು.

60. ಚುನಾವಣಾ ತಂತ್ರಗಳು ಎಡ ಮತ್ತು ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟುವುದಕ್ಕೆ ಆದ್ಯತೆ ನೀಡಬೇಕು. ಪ್ರಸ್ತುತ ಘಟ್ಟದಲ್ಲಿ, ಪ್ರಾದೇಶಿಕ ಪಕ್ಷಗಳ ನಡವಳಿಕೆಯನ್ನು/ಪಾತ್ರವನ್ನು ನೋಡಿದಾಗ/ಗಮನಿಸಿದಾಗ, ರಾಷ್ಟ್ರ ಮಟ್ಟದಲ್ಲಿ ಅವರ ಜತೆ ಮಿತ್ರಕೂಟ ರಚಿಸುವುದಕ್ಕೆ ಯಾವುದೇ ಆಧಾರವಿಲ್ಲ. ಬದಲಾಗಿ, ಎಲ್ಲಿ ಪಕ್ಷದ ಹಿತಾಸಕ್ತಿಗೆ ಅವಶ್ಯವೋ ಮತ್ತು ಆ ರಾಜ್ಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಟ್ಟುಗೂಡಿಸಬಹುದೋ ಅಂಥ ಕಡೆಗಳಲ್ಲಿ ನಾವು ಎಡಪಕ್ಷಗಳಲ್ಲದವರ ಜತೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಬಹುದು.

61. ರಾಜಕೀಯಕಾರ್ಯತಂತ್ರಾತ್ಮಕ ಧೋರಣೆಯುಪಕ್ಷದ ಸಂಘಟನೆ ಹಾಗೂ ಅದನ್ನು ಪರಿಣಾಮಕಾರಿಯಾಗಿ ಜಾರಿಮಾಡಲು ಹೊಂದಿರುವ ಸಾಮರ್ಥ್ಯದ ಮೇಲೆ ಅವಲಂಬಿತವಾಗಿದೆ. ಜನಸಮುದಾಯದ ನಡುವೆ ಕೆಲಸ ಮಾಡಲು ಹಾಗೂ ಅವರನ್ನು ವರ್ಗ ಮತ್ತು ಸಾಮೂಹಿಕ ಚಳುವಳಿಗಳಿಗೆ ತರಲು ಮತ್ತು ಸಾಮೂಹಿಕ ಪ್ರಭಾವವನ್ನು ರಾಜಕೀಯವಾಗಿ ಕ್ರೋಢೀಕರಿಸಲು ಸಜ್ಜಾದ ಸಂಘಟನೆಯಿಲ್ಲದೆ ಕಾರ್ಯತಂತ್ರಾತ್ಮಕ ಧೋರಣೆಯನ್ನುಸರಿಯಾಗಿ ಜಾರಿಮಾಡಲು ಸಾಧ್ಯವಿಲ್ಲ. ಪಕ್ಷದ ಕಾರ್ಯಕರ್ತರ ಸೈದ್ಧಾಂತಿಕ ತಿಳುವಳಿಕೆಯ ಮಟ್ಟ ಕೂಡ ಒಂದು ಮುಖ್ಯ ಅಂಶವೇ. ನಾವು ಎಲ್ಲಾ ಹಂತಗಳಲ್ಲಿನ ಪಕ್ಷದ ಸಂಘಟನೆಯ ಸ್ಥಿತಿಯನ್ನು ವಿಮರ್ಶೆಗೆ ಒಳಪಡಿಸಬೇಕು ಮತ್ತು ಕಾರ್ಯನಿರ್ವಹಣೆಯ ವಿಧಾನಗಳು ಮತ್ತು ಶೈಲಿಯನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಬೇಕು. ಈ ಆಧಾರದಲ್ಲಿ, ನಾವು ಸಂಘಟನೆಗೆ ಹೊಸ ಚೈತನ್ಯ ನೀಡಬೇಕು ಮತ್ತು ವಿವಿಧ ಜನವಿಭಾಗಗಳನ್ನು ತಲುಪಲು ಹೊಸ ಹಾದಿಗಳನ್ನು ರಚಿಸಬೇಕು. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳಿಗೆ ಸಂಬಂಧಪಟ್ಟಂತೆ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಸರಿಯಾದ ದೃಷ್ಟಿಕೋನ, ಅವುಗಳ ಸ್ವತಂತ್ರ ಕಾರ್ಯನಿರ್ವಹಣೆ ಮತ್ತು ಸರಿಯಾದ ಧೋರಣೆಗಳನ್ನು ಖಾತ್ರಿಪಡಿಸಬೇಕು. 21ನೇ ಮಹಾಧಿವೇಶನವು ಪ್ರಸ್ತುತ ರಾಜಕೀಯ ತಂತ್ರಗಾರಿಕೆಯನ್ನು ಅಂಗೀಕರಿಸಿದ ಮೇಲೆ, ಸಂಘಟನೆ ಕುರಿತ ಪ್ಲೀನಮ್ ಈ ಬಹು ಮುಖ್ಯವಾದ ಕೆಲಸವನ್ನು ಕೈಗೆತ್ತಿಕೊಳ್ಳಬೇಕು.

## ರಾಜಕೀಯ–ತಂತ್ರಗಾರಿಕೆಯ ಕರಡು ವಿಮರ್ಶಾ ವರದಿಗೆ ತಿದ್ದುಪಡಿಗಳನ್ನು ಕಳಿಸುವ ಕಾರ್ಯವಿಧಾನ ಈ ಕೆಳಗಿನಂತಿದೆ:

1. ಎಲ್ಲಾ ತಿದ್ದುಪಡಿಗಳಲ್ಲೂ ಪ್ಯಾರಾ ನಂಬರ್ ಹಾಗೂ ಸಾಲುಗಳ ನಂಬರ್ ನಮೂದಿಸಬೇಕು;
2. ತಿದ್ದುಪಡಿಗಳನ್ನು ಕಳಿಸುವ ಸಂಬಂಧಪಟ್ಟ ಸಂಗಾತಿ/ಘಟಕವು ಹೆಸರು/ಘಟಕದ ಹೆಸರನ್ನು ನಮೂದಿಸಬೇಕು;
3. ಮಾರ್ಚ್ 25, 2015 ರೊಳಗೆ ಈ ಕೆಳಗಿನ ವಿಳಾಸಕ್ಕೆ ತಲುಪಬೇಕು;
4. ಅಂಚೆ/ಕುರಿಯರ್ ಮೂಲಕ ಕಳಿಸುವವರು ಈ ಕೆಳಗಿನ ವಿಳಾಸಕ್ಕೆ ಕಳಿಸಬೇಕು:

**Communist Party of India (Marxist)**
**Central Committee, A.K. Gopalan Bhavan**
**27–29 Bhai Vir Singh Marg, New Delhi – 110 001**

5. ಕವರಿನ ಮೇಲೆ 'Amendments to the Draft Review Report on the Political-Tactical Line' ಎಂದು ಬರೆದಿರಬೇಕು.
6. ಫ್ಯಾಕ್ಸ್ ಮೂಲಕ ಕಳಿಸಿದರೆ ಅಸ್ಪಷ್ಟವಾಗಿರುತ್ತದೆಯಾದ್ದರಿಂದ ಫ್ಯಾಕ್ಸ್ ಮೂಲಕ ಕಳಿಸಬೇಡಿ;
7. ಈಮೈಲ್ ಮೂಲಕ ತಿದ್ದುಪಡಿಗಳನ್ನು ಕಳಿಸುವವರು ವರ್ಡ್‌ಫೈಲ್‌ನಲ್ಲಿ ಮಾತ್ರ ಕಳಿಸಿ. ಇಂಗ್ಲಿಷ್ ಅಲ್ಲದ ಭಾಷೆಯಲ್ಲಿ ಕಳಿಸುವವರು ಪಿಡಿಎಫ್ ಫೈಲ್ ಕಳಿಸಿ.
8. ಈಮೈಲನ್ನು ptl@cpim.orgವಿಳಾಸಕ್ಕೆ ಕಳಿಸಿ ಮತ್ತು ವಿಷಯ "Amendments to the Draft Review Report on the Political-Tactical Line" ಎಂದು ನಮೂದಿಸಿ.
9. ತಿದ್ದುಪಡಿಗಳನ್ನು ಈ ಕೆಳಗಿನ ರೂಪದಲ್ಲಿ ಕಳಿಸಿದರೆ ಉಪಕಾರವಾಗುತ್ತದೆ:

| ಕ್ರಮ ಸಂ. | ಪ್ಯಾರಾ ನಂ. | ಸಾಲಿನ ನಂ. | ತಿದ್ದುಪಡಿ | ಕಳುಹಿಸುವವರ ಸಹಿ |
|---|---|---|---|---|
| | | | | |

ಕನ್ನಡದಲ್ಲಿ ತಿದ್ದುಪಡಿಗಳನ್ನು ಕಳುಹಿಸುವವರು ಕೆಳಗಿನ ವಿಳಾಸಕ್ಕೆ ಕಳುಹಿಸುವುದು –

ಕಾರ್ಯದರ್ಶಿ,
ಸಿಪಿಐ(ಎಂ), ಕರ್ನಾಟಕ ರಾಜ್ಯಸಮಿತಿ
ಇ.ಎಂ.ಎಸ್. ಭವನ, ನಂ. 37/ಎ, 8ನೇ ಅಡ್ಡರಸ್ತೆ,
ಮಹಾಲಕ್ಷ್ಮಿ ಲೇಔಟ್, ಬೆಂಗಳೂರು–560 086
ಇ–ಮೇಲ್: cpimkar@gmail.com

**ಜನವರಿ 2015** **ರೂ. 10**

ಪ್ರಕಟಣೆ: **ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ),** ಕರ್ನಾಟಕ ರಾಜ್ಯ ಸಮಿತಿ
ಇ.ಎಂ.ಎಸ್. ಭವನ, ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್,
ಬೆಂಗಳೂರು–560 008